# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಜನವರಿ 14, 2022

ಸಂಪುಟ : 48 ಸಂಚಿಕೆ : 244 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


### ಹೈಕೋರ್ಟ್ ಚಾಟಿ, ಹೈಕಮಾಂಡ್ ಸೂಚನೆ

## ಕಾಂಗ್ರೆಸ್ ಪಾದಯಾತ್ರೆ ಮುಂದಕ್ಕೆ

ಬೆಂಗಳೂರು, ಜ. 13 - ರಾಜ್ಯದಲ್ಲಿ ಕೊರೊನಾ ವ್ಯಾಪಕವಾಗಿ ಹರಡುತ್ತಿದ್ದರೂ, ಹಠಕ್ಕೆ ಬಿದ್ದು ಮೇಕೆದಾಟು ಯೋಜನೆಗೆ ಒತ್ತಾಯಿಸಿ ಪಾದಯಾತ್ರೆ ನಡೆಸುತ್ತಿದ್ದ ಕಾಂಗ್ರೆಸ್ ಮುಖಂಡರು, ಹೈಕೋರ್ಟ್ ಚಾಟಿ ನಂತರ ಯಾತ್ರೆ ಕೈ ಬಿಟ್ಟಿದ್ದಾರೆ.

ಹನ್ನೊಂದು ದಿನಗಳ ಈ ಪಾದ ಯಾತ್ರೆಯನ್ನು ನಾಲ್ಕನೇ ದಿನಕ್ಕೆ ಮೊಟಕು ಗೊಳಿಸಿರುವುದನ್ನು ಪ್ರಕಟಿಸಿದ ಪಕ್ಷದ ಮುಖಂಡರು, ನ್ಯಾಯಾಲಯಕ್ಕೆ ಗೌರವ ಕೊಡುವ ದೃಷ್ಟಿಯಿಂದ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದೇವೆ ಎಂದಿದ್ದಾರೆ.

ಮೇಕೆದಾಟು ಯೋಜನೆಗೆ ಒತ್ತಾಯಿಸಿ ಪಾದಯಾತ್ರೆ ಕೈಬಿಡಲು ಹೈಕೋರ್ಟ್ ಚಾಟಿ ಬೀಸಿದ ಬೆನ್ನಲ್ಲೇ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರು ಪಾದಯಾತ್ರೆಯಿಂದ ಹಿಂದೆ ಸರಿಯಿರಿ ಎಂದು ಆದೇಶ ಮಾಡಿದ್ದರು.

ನ್ಯಾಯಾಲಯದ ಆದೇಶ ಹೊರ ಬರುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಜೊತೆ ದೂರವಾಣಿಯಲ್ಲಿ ಚರ್ಚಿಸಿದ್ದರು. ಆಗ ತಾತ್ಕಾಲಿಕವಾಗಿ ಪಾದ ಯಾತ್ರೆಯಿಂದ ಹಿಂದೆ ಸರಿಯಿರಿ ಎಂದು ರಾಹುಲ್ ಗಾಂಧಿ ತಿಳಿಸಿದ್ದರು ಎಂದು ಮೂಲಗಳು ಹೇಳಿವೆ.

ನ್ಯಾಯಾಲಯದ ಆದೇಶ ಹೊರ ಬರುತ್ತಿದ್ದಂತೆ ರಾಮನಗರ (2ನೇ ಪುಟಕ್ಕೆ)

# ಟೆಸ್ಟ್, ಬೂಸ್ಟರ್ ಡೋಸ್ ಹೆಚ್ಚಿಸಲು ಗಡುವು

## ಮೂರನೇ ಅಲೆ ಎದುರಿಸಲು ಆಸ್ಪತ್ರೆಗಳನ್ನು ಸನ್ನದ್ಧವಾಗಿರಿಸಲು ಸಚಿವ ಭೈರತಿ ಸೂಚನೆ

ದಾವಣಗೆರೆ, ಜ. 12 – ಕೊರೊನಾ ಟೆಸ್ಟ್ ಹೆಚ್ಚಿಸಿ, ಲಸಿಕೆ ಚುರುಕುಗೊಳಿಸಿ, ಹೊರಗಿನಿಂದ ಬರುವವರ ಮೇಲೆ ನಿಗಾ ಇಡುವ ಜೊತೆಗೆ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಸನ್ನದ್ಧವಾಗಿಟ್ಟುಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೊರೊನಾ ಮೂರನೇ ಅಲೆ ನಿಯಂತ್ರಣದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಭವನದಲ್ಲಿ ಕರೆಯಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಬೂಸ್ಟರ್ ಲಸಿಕೆ ಪ್ರಮಾಣ ಶೇ.33ರ ಹಂತದಲ್ಲಿದೆ. 11 ಸಾವಿರ ಜನರಲ್ಲಿ 4 ಸಾವಿರ ಜನರಿಗೆ ಮಾತ್ರ ಲಸಿಕೆ ನೀಡಲಾಗಿದೆ. ಜ. 20ರಂದು ತಾವು ಮತ್ತೊಂದು ಸಭೆ ನಡೆಸುವಷ್ಟರಲ್ಲಿ ಅರ್ಹ ಎಲ್ಲರಿಗೂ ಬೂಸ್ಟರ್ ಲಸಿಕೆ ಕೊಟ್ಟಿರಬೇಕು ಎಂದು ಗಡುವು ನೀಡಿದರು.

ಎರಡನೇ ಡೋಸ್ ಚುರುಕುಗೊಳಿಸುವ ಜೊತೆಗೆ, ಮಕ್ಕಳ ಲಸಿಕೆಗೂ ತ್ವರಿತ ಕ್ರಮ ತೆಗೆದುಕೊಳ್ಳಬೇಕು. ವಾರದೊಳಗೆ ಅರ್ಹ ಎಲ್ಲರಿಗೂ ಲಸಿಕೆ ಕೊಡದೇ ಇದ್ದರೆ, ಜಿಲ್ಲಾ ಹಾಗೂ ತಾಲ್ಲೂಕು ವೈದ್ಯಾಧಿಕಾರಿಗಳು ಹೊಣೆಯಾಗುತ್ತಾರೆ ಎಂದು ಎಚ್ಚರಿಕೆ ನೀಡಿದರು.

ಬೂಸ್ಟರ್ ಲಸಿಕೆ ನೀಡುವಲ್ಲಿ ವಿಳಂಬವಾಗಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ಸರ್ಕಾರದಿಂದ ಸಂಬಳ ಪಡೆಯುವವರಿಗೆ ನಿಯತ್ತಾಗಿ ಕೆಲಸ ಮಾಡುವುದು ಗೊತ್ತಿಲ್ಲವೇ? ಲಸಿಕೆ ಕೊಡಲಿಕ್ಕೂ ನಾನೇ ಬರಬೇಕೇ? ಲಸಿಕೆ ಕೊಡದೇ ಕಾಗಕ್ಕ – ಗುಬ್ಬಕ್ಕನ ಕಥೆ ಹೇಳುತ್ತಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡರು.

ಪೊಲೀಸರು ಮಾಸ್ಕ್ ಕಡ್ಡಾಯಕ್ಕೆ (2ನೇ ಪುಟಕ್ಕೆ)



ರೈತರಿಂದ ಮೆಕ್ಕೆಜೋಳ ಖರೀದಿಸಿ ವಂಚಿಸಿದ್ದ ವ್ಯಕ್ತಿಯಿಂದ ವಶ ಪಡಿಸಿಕೊಂಡ ಹಣವನ್ನು ಜಿಲ್ಲಾಡಳಿತ ಭವನದಲ್ಲಿಂದು ನಡೆದ ಕಾರ್ಯಕ್ರಮದಲ್ಲಿ ಮರಳಿ ರೈತರಿಗೆ ನೀಡಲಾಯಿತು.

### ಇಬ್ಬರಿಗೆ ಮಾತ್ರ ಆಕ್ಸಿಜನ್

ಜಿಲ್ಲೆಯಲ್ಲಿ ಈಗ 282 ಸಕ್ರಿಯ ಕೊರೊನಾ ಸೋಂಕಿತರಿದ್ದಾರೆ. ಇವರಲ್ಲಿ ಶೇ.90ರಷ್ಟು ಜನ ಲಕ್ಷಣ ರಹಿತರಾಗಿದ್ದಾರೆ. ಕೇವಲ ಇಬ್ಬರಿಗೆ ಮಾತ್ರ ಆಕ್ಸಿಜನ್ ಅಗತ್ಯ ಕಂಡು ಬಂದಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಡಿ.ಜಿ. ರಾಘವನ್ ತಿಳಿಸಿದ್ದಾರೆ. ಪಾಸಿಟಿವಿಟಿ ದರ ಈಗ ಶೇ.5.54ಕ್ಕೆ ತಲುಪಿದೆ. ದಾವಣಗೆರೆ ನಗರದಲ್ಲಿ ಅತಿ ಹೆಚ್ಚಿನ 190 ಸಕ್ರಿಯ ಸೋಂಕಿತರಿದ್ದಾರೆ ಎಂದವರು ಹೇಳಿದರು.

## ರೈತರ 2.68 ಕೋ.ರೂ.ವಾಪಸ್

**ಹಣ ಕೊಡಿಸಿದ ಮುಖಂಡರು, ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಅನ್ನದಾತರಿಂದ ಅಭಿನಂದನಾ ಸನ್ಮಾನ**

ದಾವಣಗೆರೆ ಜ. 13 - ಮೆಕ್ಕೆಜೋಳ ಖರೀದಿಸಿದ ಹಣವನ್ನು ರೈತರು ಹಾಗೂ ವರ್ತಕರಿಗೆ ನೀಡದೇ ವಂಚಿಸಿದ್ದ ವ್ಯಕ್ತಿಯಿಂದ 2.68 ಕೋಟಿ ರೂ. ವಸೂಲಿ ಮಾಡಿ, ರೈತರಿಗೆ ಕೊಡಿಸಲು ಕಾರಣಕರ್ತರಾದ ಮುಖಂಡರು, ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ವಕೀಲರಿಗೆ ರೈತರು ಜಿಲ್ಲಾಡಳಿತ ಭವನದಲ್ಲಿ (3ನೇ ಪುಟಕ್ಕೆ)

# ಬರದ ನಾಡಿನ ರೈತರಲ್ಲಿ ಸಂಭ್ರಮ

## ಭರಮಸಾಗರ-ತುಪ್ಪದಹಳ್ಳಿ ಕೆರೆ ವೀಕ್ಷಿಸಿದ ತರಳಬಾಳು ಶ್ರೀ



ಜಗಳೂರು, ಜ.13- ಭರಮಸಾಗರ ಕೆರೆ ಕೋಡಿ ಬಿದ್ದು ತಾಲ್ಲೂಕಿನಲ್ಲಿ ನೀರು ಹರಿದಷ್ಟೂ ರೈತರ ಮನದಲ್ಲಿ ಸಂತಸ ಹರಿಯುತ್ತಿದ್ದು, ಬರದ ನಾಡಿನಲ್ಲಿ ಸಂಭ್ರಮ ಉಂಟಾಗಿದೆ ಎಂದು ಸಿರಿಗೆರೆ ತರಳಬಾಳು ಬೃಹನ್ಮಠದ ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಬಿಳಿಚೋಡು ಗ್ರಾಮದ ಚೆಕ್ ಡ್ಯಾಂ ಬಳಿ ನೀರಿನ ಹರಿವು ಮತ್ತು ಕಾಮಗಾರಿ ವೀಕ್ಷಿಸಿ ಬಾಗಿನ ಅರ್ಪಿಸಿ, ನಂತರ ಬಹಿರಂಗ ಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಕೆರೆ ತುಂಬಿಸುವ ಯೋಜನೆಗಳು ಕೇವಲ ಶ್ರೀಗಳಿಂದ ಮಾತ್ರವಲ್ಲ ಕಾಲ ಕಾಲಕ್ಕೆ ಬದಲಾದ ಸರ್ಕಾರಗಳು ಯೋಜನೆಗಳನ್ನು ಜಾರಿಗೊಳಿಸುವ ಕೆಲಸ ಮಾಡಿದ ಫಲವಾಗಿ ಕ್ಷೇತ್ರಗಳಿಗೆ ಗಂಗೆ ಹರಿಯುತ್ತಿದ್ದಾಳೆ. ಜಗಳೂರಿನ ತರಳಬಾಳು ಹುಣ್ಣಿಮೆ ಸಾರ್ಥಕವಾಯಿತು ಎಂದು ಸಂತಸ ವ್ಯಕ್ತಪಡಿಸಿದರು.

ಭರಮಸಾಗರದ ಕೆರೆ ಕೋಡಿ ಬಿದ್ದು ಬಿಳಿಚೋಡು ಭಾಗದಲ್ಲಿ ಝುಳು ಝುಳನೆ ಹರಿಯುವ ನೀರು ವೀಕ್ಷಿಸಲು ಸುಂದರವಾಗಿದೆ. ಸಾಲ ಸೂಲ ಮಾಡಿ ಆರ್ಥಿಕವಾಗಿ ಕಂಗಾಲಾಗಿದ್ದ ರೈತರ ಮುಖದಲ್ಲಿ ಹರ್ಷ (3ನೇ ಪುಟಕ್ಕೆ)

## 19 ರಿಂದ ನೀಟ್ - ಯು.ಜಿ. ಪರೀಕ್ಷೆ

ನವದೆಹಲಿ, ಜ. 13 – ನೀಟ್ - ಯುಜಿ ಪ್ರವೇಶಕ್ಕೆ ಕೌನ್ಸೆಲಿಂಗ್ ಜನವರಿ 19ರಿಂದ ಆರಂಭವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಎಂ.ಸಿ.ಸಿ.ಯು ಜನವರಿ 19ರಿಂದ ಕೌನ್ಸೆಲಿಂಗ್ ಆರಂಭಿಸಲಿದೆ. ವಿದ್ಯಾರ್ಥಿಗಳಿಗೆ ಶುಭ ಹಾರೈಸುವುದಾಗಿ ತಿಳಿಸಿದ್ದಾರೆ.

## ಸಂಕ್ರಾಂತಿಗೂ ಮಾರ್ಗಸೂಚಿ

### ನಿರ್ಬಂಧಗಳು 31 ರವರೆಗೆ ಮುಂದುವರಿಕೆ

ದಾವಣಗೆರೆ, ಜ. 13- ಕೋವಿಡ್ ಸೋಂಕು ನಿಯಂತ್ರಣಕ್ಕೆ ಸರ್ಕಾರ ಜ. 4 ರಂದು ಹೊರಡಿಸಿದ್ದ ಮಾರ್ಗಸೂಚಿ ಇದೇ ಜ. 31 ರವರೆಗೂ ಮುಂದುವರೆಯಲಿದ್ದು, ಇದರೊಂದಿಗೆ ವಾರಾಂತ್ಯ ಕರ್ಫ್ಯೂ ಸಹ ಮುಂದುವರೆಯಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಸಂಕ್ರಾಂತಿ ಹಬ್ಬದ ಪ್ರಯುಕ್ತ ದೇವಾಲಯದ ಒಳ ಆವರಣದಲ್ಲಿ ಮಾತ್ರ ಸಂಪ್ರದಾಯದಂತೆ ದೈನಂದಿನ ಪೂಜಾ ಕೈಂಕರ್ಯ ನಡೆಸಲು ಅನುಮತಿಸಿದೆ. ಪೂರ್ಣ ಪ್ರಮಾಣದ ಕೋವಿಡ್ ಲಸಿಕೆ ಪಡೆದ 50 ಜನರಿಗೆ ಮಾತ್ರ ಒಂದು ಬಾರಿಗೆ ದೇವರ ದರ್ಶನಕ್ಕೆ ಅವಕಾಶವಿರುತ್ತದೆ. ಉಳಿದಂತೆ ಯಾವುದೇ ಸೇವೆಗೆ ಅನುಮತಿ ಇಲ್ಲ. ಹಬ್ಬಗಳ ಆಚರಣೆ ಸಲುವಾಗಿ ಯಾವುದೇ ರೀತಿಯ ಮೆರವಣಿಗೆ, ಮನೋರಂಜನಾ ಕಾರ್ಯಕ್ರಮ ಇತ್ಯಾದಿ ಆಯೋಜಿಸುವಂತಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## 92 ಪಾಸಿಟಿವ್

ದಾವಣಗೆರೆ, ಜ.13- ಜಿಲ್ಲೆಯಲ್ಲಿ 92 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 13 ಜನರು ಗುಣಮುಖರಾಗಿದ್ದಾರೆ. 361 ಸಕ್ರಿಯ ಪ್ರಕರಣಗಳಿವೆ. ದಾವಣಗೆರೆ ತಾಲ್ಲೂಕಿನಲ್ಲಿ 67, ಹರಿಹರ 9, ಜಗಳೂರು 6, ಚನ್ನಗಿರಿ 3, ಹೊನ್ನಾಳಿ 4 ಹಾಗೂ ಹೊರ ಜಿಲ್ಲೆಯ ಮೂವರಲ್ಲಿ ಸೋಂಕು ಕಾಣಿಸಿಕೊಂಡಿದೆ.

## ಹುಟ್ಟು ಹಬ್ಬದ ಶುಭಾಶಯಗಳು



**ಶ್ರೀಮತಿ ಆರ್. ಭಾಗ್ಯಲಕ್ಷ್ಮಿ**

ವಕೀಲರು, ದಾವಣಗೆರೆ. ಫೋ. : 9591429199

ಇಂದು ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ ಇವರಿಗೆ ಭಗವಂತನು ಆಯುರಾರೋಗ್ಯ-ಐಶ್ವರ್ಯವನ್ನಿತ್ತು ಕಾಪಾಡಲೆಂದು ಹಾರೈಸುತ್ತೇವೆ.

ಶ್ರೀಯುತ ಉಜ್ಜನಪ್ಪ ಕಡೆವಡೆಯರ್ ಕಾಡಜ್ಜಿ
ಸೋನಾಲಿಕ ಟ್ರ್ಯಾಕ್ಟರ್ ಅಧಿಕೃತ ಮಾರಾಟಗಾರರು
ಮಕ್ಕಳಾದ : ತೇಜಸ್ ಯು. ಶ್ರೇಯಸ್ ಯು.
ಶ್ರೀಮತಿ ಶ್ರೀದೇವಿ ಸಂತೋಷ್, ಚಿ|| ಶ್ರೀಷನ್ ಸಾಮ್ರಾಟ್
ವಕೀಲರುಗಳಾದ : ಶ್ರೀಯುತ ಲೋಕಿಕೆರೆ ಸಿದ್ದಪ್ಪ
ಶ್ರೀ ಫಯಾಜ್ ಅಹಮದ್, ಶ್ರೀ ಚಮನ್ ಸಾಬ್
ಶ್ರೀಮತಿ ಸಬ್ರಿನ್ ತಾಜ್, ಕು|| ಕೆ. ಎಸ್. ರೋಹಿಣಿ
ಕುಟುಂಬದವರು ಹಾಗೂ ದಾವಣಗೆರೆ ವಕೀಲ ಮಿತ್ರರು
ಆಂಜನೇಯ ಬಡಾವಣೆ ಹಾಗೂ ಸಿದ್ದವೀರಪ್ಪ ಬಡಾವಣೆ,
ಮಹಿಳಾ ಮಿತ್ರರು, ಬಂಧು-ಬಳಗದವರು, ದಾವಣಗೆರೆ.

## ಸವಿ ನೆನಪು




**ಲಿಂ|| ಶ್ರೀಮತಿ ಪ್ರೇಮ ರಾಜಶೇಖರ್ ಮುದೇಗೌಡ್ರ**

ನಿಧನ : 14.01.2013

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಮುದೇಗೌಡ್ರ ರಾಜಶೇಖರ್
ಪುತ್ರಿ: ಶ್ರೀಮತಿ ನೀತಾ ವಿಕಾಸ್, ಅಳಿಯ : ಎಂ.ಎಸ್. ವಿಕಾಸ್ ಮೆಳ್ಳೇಕಟ್ಟೆ
ಮೊಮ್ಮಕ್ಕಳು : ಎಂ.ವಿ. ಜಯಧರ, ಎಂ.ವಿ. ಪ್ರೇರಣ
ಹಾಗೂ ಮುದೇಗೌಡ್ರು ವಂಶಸ್ಥರು.

## ಸವಿನೆನಪು



**ಲಿಂ|| ಶ್ರೀ ಜೋಗಪ್ಪರ ಕಾಡಪ್ಪನವರು** — ಸ್ವಾತಂತ್ರ್ಯ ಹೋರಾಟಗಾರರು, ನಿಧನ : 05.11.1987

**ಲಿಂ|| ಶ್ರೀಮತಿ ಫಕ್ಕೀರಮ್ಮ ಕಾಡಪ್ಪ** — ನಿಧನ : 14.01.2019

ಪುತ್ರರು : ಶ್ರೀಮತಿ ಶೋಭಾ ಮತ್ತು ಜೆ.ಕೆ. ಕರಿಬಸಪ್ಪ ಮತ್ತು ಮಕ್ಕಳು
ಶ್ರೀಮತಿ ಲಕ್ಕಮ್ಮ ಮತ್ತು ಜೆ.ಕೆ. ಕೊಟ್ರಬಸಪ್ಪ ಮತ್ತು ಮಕ್ಕಳು
ಶ್ರೀಮತಿ ಚಂದ್ರಕಲಾ ಮತ್ತು ಜೆ.ಕೆ. ಶಿವಾನಂದ ಮತ್ತು ಮಕ್ಕಳು
ಶ್ರೀಮತಿ ಸುನಂದ ಮತ್ತು ಜೆ.ಕೆ. ಚಂದ್ರಶೇಖರ್ ಮತ್ತು ಮಕ್ಕಳು
ಶ್ರೀಮತಿ ಕೆಂಚಮ್ಮ ಮತ್ತು ಜೆ.ಕೆ. ವೀರಣ್ಣ ಮತ್ತು ಮಕ್ಕಳು
ಪುತ್ರಿ : ಶ್ರೀಮತಿ ಹೊನ್ನಮ್ಮ ಮತ್ತು ಟಿ.ಗಂಗಾಧರಪ್ಪ
ಮರಿಮೊಮ್ಮಕ್ಕಳು ಹಾಗೂ ಜೋಗಪ್ಪರ ವಂಶಸ್ಥರು
ಶ್ರೀ ಬೀರಲಿಂಗೇಶ್ವರ ಅಂಡ್ ಕೋ., ಎಪಿಎಂಸಿ ಎ ಬ್ಲಾಕ್, ದಾವಣಗೆರೆ.
ವಿಶ್ವಾಸ್ ಸ್ಟೀಲ್ಸ್ & ಸಿಮೆಂಟ್ಸ್
ರಾಜ್‌ಭವನ್ ಗಾರ್ಡನ್ ಬಾರ್ & ರೆಸ್ಟೋರೆಂಟ್
ಪಿ.ಬಿ. ರೋಡ್, ದಾವಣಗೆರೆ.

## ವಿದೇಶ ಪ್ರಯಾಣ–ಶುಭ ಹಾರೈಕೆಗಳು



**ಅಕ್ಷಯ ವೈ. ಶಾಮನೂರು**

ಇವರು ಉನ್ನತ ವ್ಯಾಸಂಗ ಮಾಡಲು ಉತ್ತರ ಅಮೇರಿಕಾದ ವಾಷಿಂಗ್ಟನ್ ಸ್ಟೇಟ್ ಯುನಿರ್ವಸಿಟಿ ಯು.ಎಸ್.ಎ. (Washing Ton State University, USA)ಗೆ ತೆರಳಿದ್ದಾರೆ.
ಅವರು ಉನ್ನತ ಶಿಕ್ಷಣದಲ್ಲಿ ಯಶಸ್ವಿಯಾಗಲೆಂದು ಹಾರೈಸುವವರು....

ತಂದೆ, ತಾಯಿ, ಅಕ್ಕ : ತೇಜಸ್ವಿನಿ ವೈ., ಬಾವ ಲೋಹಿತ್ ಕೆ.ಎಂ.
ಮತ್ತು ಅಳಿಯ ಧೀಮಂತ್, ಕೆ.ಎಲ್. ಬೆಂಗಳೂರು.
ದಿ|| ಶ್ರೀಮತಿ ಮತ್ತು ಶ್ರೀ ಮಹದೇವಪ್ಪ ಮೇಷ್ಟ್ರು, ಮಕ್ಕಳು ಮತ್ತು ಮೊಮ್ಮಕ್ಕಳು, ಕಕ್ಕರಗೊಳ್ಳ.
ದಿ|| ಶ್ರೀಮತಿ ಮತ್ತು ಶ್ರೀ ವೈ. ತಿಮ್ಮಪ್ಪನವರ ಮಕ್ಕಳು ಮತ್ತು ಮೊಮ್ಮಕ್ಕಳು, ಶಾಮನೂರು.
ಶ್ರೀಮತಿ ಮತ್ತು ಶ್ರೀ ಕೆ. ಮಹೇಶ್ವರಪ್ಪನವರು
ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ದಾವಣಗೆರೆ.

## ಶಿವಗಂಗಮ್ಮ ಉರೇಕೊಂಡಿ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 8ನೇ ಮೇನ್, 14ನೇ ಕ್ರಾಸ್ ವಾಸಿ ದಿ|| ಶ್ರೀಕಂಠಪ್ಪ ಉರೇಕೊಂಡಿ ಇವರ ಧರ್ಮಪತ್ನಿ

**ಶ್ರೀಮತಿ ಶಿವಗಂಗಮ್ಮ ಉರೇಕೊಂಡಿ**

ಇವರು, ದಿನಾಂಕ 13.01.2022ರ ಗುರುವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು,ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಸಿದ್ದವೀರಪ್ಪ ಬಡಾವಣೆ 8ನೇ ಮೇನ್, 14ನೇ ಕ್ರಾಸ್‌ನ ಸ್ವಗೃಹದಲ್ಲಿ ದಿನಾಂಕ 14.01.2022ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ:**
ಓ.ಎಸ್ ಶಶಿಧರ್ ಮತ್ತು ಸಹೋದರಿಯರು
ಹಾಗೂ ಉರೇಕೊಂಡಿ ಬಂಧುಗಳು, ದಾವಣಗೆರೆ
ಮೊ: 63629 83074, 98807 97069

## ಸಂಕ್ರಾಂತಿ ಹಬ್ಬ

ಸಂಕ್ರಾಂತಿ ಹಬ್ಬ ಸಡಗರದ ಹಬ್ಬ
ಸಂತೋಷದಿ ಬೇವು ಬೆಲ್ಲ ಹಂಚುವ ಹಬ್ಬ
ಚೆಂದದಿ ಎಲ್ಲರು ಬೆರೆವ ಸ್ನೇಹ ಹೆಚ್ಚಿಸೊ ಹಬ್ಬ
ಅಂದದ ಸಕ್ಕರೆ ಅಚ್ಚು ನೀಡುವ ಹಬ್ಬ

ಕಬ್ಬು ಬಾಳೆಹಣ್ಣು ಎಲ್ಲರಿಗು ಕೊಡುತ
ತಬ್ಬುವ ಕಷ್ಟ ಸುಖವ ಹೆದರದೆ ಎನುತ
ಕಬ್ಬಿನಂತೆ ಸಿಹಿಯಾದ ಮಾತನ್ನು ಆಡುತ
ಅಬ್ಬರವಿಲ್ಲದೆ ಬಾಳುವ ಎಂದು ಸಾರುತ

ಸುಗ್ಗಿಯ ಸಂಭ್ರಮದಿಂದ ನಲಿದಾಡುತ
ಹುಗ್ಗಿ ನೈವೇದ್ಯವ ದೇವರಿಗಿಡುತ
ಹಿಗ್ಗಿಹಿಗ್ಗಿ ಮಕ್ಕಳೆಲ್ಲ ಆಟವಾಡುತ
ಬಗ್ಗಿ ಭೂತಾಯಿಗೆ ನಮನ ಸಲಿಸುತ

ಒಳ್ಳೆಯ ಮಾತನಾಡಿ ಎಂಬ ಸಂದೇಶ ಸಾರುತ
ಎಳ್ಳಿನ ಕಹಿ ಸಹಿಸಿದಾಗ ಬೆಲ್ಲದ ಸಿಹಿ ಎನ್ನುತ
ಬೆಳ್ಳನೆ ಕಡಲೆಕಾಯಿ ಕೊಬ್ಬರಿಯ ಸವಿಯುತ
ಸುಳ್ಳು ಕಪಟ ಬಿಟ್ಟು ಸಿರಿಹರಿಯ ಒಲಿಸುತ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಧೂಳೆಹೊಳೆ : ಸಾಮೂಹಿಕ ಸಂಕ್ರಾಂತಿ ಮುಂದೂಡಿಕೆ

ಧೂಳೆಹೊಳೆ ಗ್ರಾಮದ ತುಂಗಭದ್ರಾ ನದಿ ತಟದಲ್ಲಿರುವ ಜಿಎಂಸಿಜಿ ಪ್ರೌಢಶಾಲೆ ಮುಂಭಾಗದಲ್ಲಿರುವ ಸಮುದಾಯ ಭವನದಲ್ಲಿ ಇಂದು ಆಚರಿಸುವ ಸಾಮೂಹಿಕ ಸಂಕ್ರಾಂತಿ ಹಬ್ಬವನ್ನು ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿದೆ ಎಂದು ಸಿರಿಗೆರೆ ನಾಗನಗೌಡ್ರು ತಿಳಿಸಿದ್ದಾರೆ.

# ಗ್ರೀನ್ ಸಿಟಿ ಡೋರ್ ನಂಬರ್‌ಗೆ ಒಪ್ಪಿಗೆ

## ನಗರಸಭೆ ಸಾಮಾನ್ಯ ಸಭೆಯಲ್ಲಿ ಜಲಸಿರಿ, ಆಟೋ ನಿಲ್ದಾಣದ ಹೆಸರಿನ ಚರ್ಚೆ

ಹರಿಹರ, ಜ.13- ನಗರದ ಬಹು ದೊಡ್ಡ ಗ್ರೀನ್ ಸಿಟಿ ವಾಣಿಜ್ಯ ಮತ್ತು ವಸತಿ ನಿವೇಶನಗಳಿಗೆ ಡೋರ್ ನಂಬರ್ ನೀಡುವುದಕ್ಕೆ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಒಬ್ಬ ಸದಸ್ಯ ಹೊರತು ಪಡಿಸಿ ಉಳಿದೆಲ್ಲರೂ ಒಪ್ಪಿಗೆ ನೀಡಿದ್ದಾರೆ.

ಸಾಮಾನ್ಯ ಸಭೆಯಲ್ಲಿ ಗ್ರೀನ್ ಸಿಟಿ ಯೋಜನೆ ಕುರಿತು ಪ್ರಮುಖವಾಗಿ ಚರ್ಚೆ ನಡೆಯಿತು. ಗ್ರೀನ್ ಸಿಟಿ ಇರುವ ವಾರ್ಡ್‌ನ ಸದಸ್ಯ ಪಿ.ಎನ್. ವಿರುಪಾಕ್ಷ ಮಾತ್ರ ವಿರೋಧ ವ್ಯಕ್ತಪಡಿಸಿದರು. ಕಾನೂನಾತ್ಮಕ ವಾಗಿ ತೊಡಕುಗಳು ಇಲ್ಲದೇ ಹೋದರೆ ಈ ಯೋಜನೆ ಜಾರಿಗೆ ತರಬಹುದು ಎಂದು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ನ ಸದಸ್ಯರು ಒಪ್ಪಿಗೆ ನೀಡಿದರು.

ನಗರಸಭೆಯ ಅಧ್ಯಕ್ಷರಾದ ರತ್ನ ಡಿ ಉಜ್ಜೇಶ್ ರವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ಕರೆಯಲಾಗಿತ್ತು.

ಈ ಕುರಿತು ಮಾತನಾಡಿದ ಸದಸ್ಯ ಶಂಕರ್ ಖಟಾವ್ಕರ್, ಸರ್ವೆ ನಂಬರ್ ಹಾಗೂ ಅಳತೆ ಸರಿಯಾಗಿರಬೇಕು. ಸ್ಥಳದಲ್ಲಿರುವ ಕಾನೂನು ತೊಡಕುಗಳನ್ನು ಸರಿಪಡಿಸಿದ ನಂತರ ಅನುಮತಿ ನೀಡಬಹುದು ಎಂದು ಹೇಳಿದರು.

ಎ. ವಾಮನಮೂರ್ತಿ ಮಾತನಾಡಿ, ಯೋಜನೆಯಿಂದ ನಗರಸಭೆಗೆ ವಾರ್ಷಿಕ 2 ಕೋಟಿ ರೂ. ಆದಾಯ ಬಂದು ನಗರದ ಅಭಿವೃದ್ಧಿ ಆಗುತ್ತದೆ ಎಂದರು.



ಪಿ.ಎನ್. ವಿರುಪಾಕ್ಷ ಮಾತನಾಡಿ, ಗ್ರೀನ್ ಸಿಟಿ ಮಾಲೀಕ ರಾಘುಬಾಯಿ ಅವರು ಇದುವರೆಗೂ ನಗರಸಭೆ ಬಳಿ ಚರ್ಚಿಸಿಲ್ಲ. ದಿಢೀರ್ ಸಭೆಗೆ ಆಗಮಿಸಿ ಡೋರ್ ನಂಬರ್ ಕೇಳುತ್ತಿದ್ದಾರೆ. ವಾರ್ಡ್ ಸದಸ್ಯನಾಗಿರುವ ನನ್ನ ಒಪ್ಪಿಗೆ ಪಡೆಯದೇ ಡೋರ್ ನಂಬರ್‌ಗೆ ಅವಕಾಶ ಇಲ್ಲ. ಮುಂದಿನ ಸಭೆಯಲ್ಲಿ ಈ ವಿಷಯ ತರುವಂತೆ ಒತ್ತಾಯಿಸಿದರು.

ದಿನೇಶ್ ಬಾಬು ಮಾತನಾಡಿ, ಗ್ರೀನ್ ಸಿಟಿ ಮಾಲೀಕರು ಸಭೆಗೆ ಆಗಮಿಸಿ ಮಾತನಾಡಲು ಅವಕಾಶ ಕೊಟ್ಟಿರುವುದು ಸರಿಯಲ್ಲ. ಅವರನ್ನು ಸಭೆಯಿಂದ ಹೊರಗೆ ಕಳಿಸಬೇಕು ಎಂದು ಹೇಳಿದರು.

ಈ ಬಗ್ಗೆ ಚರ್ಚೆ ನಡೆಸಿದ ಸದಸ್ಯರು, ಅಂತಿಮವಾಗಿ ಕಾನೂನು ತೊಡಕು ಇಲ್ಲದೇ ಇದ್ದರೆ ಡೋರ್ ನಂಬರ್‌ಗೆ ಕ್ರಮ ತೆಗೆದುಕೊಳ್ಳಬಹುದು ಎಂಬ ನಿರ್ಧಾರಕ್ಕೆ ಬೆಂಬಲಿಸಿದರು.

**ಕಾಮಗಾರಿ ತೊಂದರೆ :** ಜಲಸಿರಿ ಮತ್ತು ಯುಜಿಡಿ ಕಾಮಗಾರಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಬೇಗ ಕಾಮಗಾರಿ ಮುಗಿಸಿ ಎಂದು ಕವಿತಾ ಮಾರುತಿ, ಆರ್.ಸಿ. ಜಾವೇದ್ ಹೇಳಿದರು.

**ಶಿವಶಂಕರ್ ಹೆಸರಿಗೆ ಆಕ್ಷೇಪ :** ಶಿವಮೊಗ್ಗ ರಸ್ತೆಯ ಆಟೋ ನಿಲ್ದಾಣಕ್ಕೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹೆಸರು ಇಟ್ಟಿರುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಶಂಕರ್ ಖಟಾವ್ಕರ್ ಆಕ್ಷೇಪಿಸಿದರು.

ಜೆಡಿಎಸ್ ಸದಸ್ಯರಾದ ಎ. ವಾಮನಮೂರ್ತಿ, ಮುಜಾಮಿಲ್, ದಾದಾ ಖಲಂದರ್, ಆರ್.ಸಿ. ಜಾವೇದ್, ಉಷಾ ಮಂಜುನಾಥ್, ನಿಂಬಕ್ಕ ಚಂದಾಪೂರ್, ಬಿ. ಅಲ್ತಾಫ್ ಸೇರಿದಂತೆ ಹಲವಾರು ಹೆಸರು ತೆಗೆಯುವುದಕ್ಕೆ ತೀವ್ರವಾಗಿ ವಿರೋಧಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೌರಾಯುಕ್ತೆ ಎಸ್.ಲಕ್ಷ್ಮಿ, ಆಟೋ ನಿಲ್ದಾಣಕ್ಕೆ ರಾಜಕೀಯ ವ್ಯಕ್ತಿಗಳ ಹೆಸರಿಡಲು ಸರ್ಕಾರದ ಸುತ್ತೋಲೆ ಪ್ರಕಾರ ಅವಕಾಶ ಇರುವುದಿಲ್ಲ. ಕಲಾವಿದರ ಹೆಸರನ್ನು ಹಾಕಲು ಅವಕಾಶವಿದೆ ಎಂದರು.

ವಸಂತ್ ಮಾತನಾಡಿ, ತುರ್ತು ಸಭೆ ಎಂದು ಕೆಳ ಹಂತದ ಸಿಬ್ಬಂದಿಗಳು ತಡವಾಗಿ ಸದಸ್ಯರಿಗೆ ತಿಳಿಸುತ್ತಾರೆ. ಸದಸ್ಯರಿಗೆ ಅವಮಾನ ಆಗುವ ರೀತಿಯಲ್ಲಿ ವರ್ತಿಸುವುದನ್ನು ಕೈ ಬಿಡಬೇಕು ಎಂದು ಹೇಳಿದರು.

ದಾದಾ ಖಲಂದರ್ ಮಾತನಾಡಿ, ಕೆಲವು ಗುತ್ತಿಗೆದಾರರಿಗೆ ಕಳೆದ ಒಂದು ವರ್ಷವಾದರು ಬಿಲ್ ಪಾವತಿಯಾಗಿಲ್ಲ. ಇನ್ನು ಕೆಲವರು ತಿಂಗಳಲ್ಲೇ ಹಣ ಪಡೆಯುತ್ತಾರೆ. ಇಂತಹ ಬೆಳವಣಿಗೆಯನ್ನು ಕೈ ಬಿಡಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ರತ್ನ ಡಿ.ಉಜ್ಜೇಶ್, ಉಪಾಧ್ಯಕ್ಷ ಬಾಬುಲಾಲ್, ಸದಸ್ಯರಾದ ಕೆ.ಜಿ. ಸಿದ್ದೇಶ್, ಎಸ್.ಎಂ. ವಸಂತ್, ಗುತ್ತೂರು ಜಂಬಣ್ಣ, ದಾದಾ ಖಲಂದರ್, ಬಿ. ಅಲ್ತಾಫ್, ನಿಂಬಕ್ಕ ಚಂದಾಪೂರ್, ಉಷಾ ಮಂಜುನಾಥ್, ದಿನೇಶ್ ಬಾಬು ರಜನಿಕಾಂತ್, ಆರ್.ಸಿ. ಜಾವೇದ್, ಪಕ್ಕೀರಮ್ಮ ಪಾರ್ವತಮ್ಮ ಐರಣಿ, ಲಕ್ಷ್ಮೀ ಮೋಹನ್, ಶಾಯಿದಾ ಸನಾವುಲ್ಲಾ, ರಾಘವೇಂದ್ರ, ಮಾರುತಿ ಶೆಟ್ಟಿ, ರಜನಿಕಾಂತ್, ಹನುಮಂತಪ್ಪ, ವಿಜಯಕುಮಾರ್, ಇಬ್ರಾಹಿಂ, ನಗರಸಭೆ ಎಇಇ ಬಿರಾದಾರ ಮತ್ತಿತರರು ಉಪಸ್ಥಿತರಿದ್ದರು.

## ಪಾದಯಾತ್ರೆ ಮುಂದಕ್ಕೆ

(1ನೇ ಪುಟದಿಂದ) ಕಾಂಗ್ರೆಸ್ ಕಚೇರಿ ಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ರಾಜ್ಯ ಮುಖಂಡರೊಟ್ಟಿಗೆ ನ್ಯಾಯಾಲಯ ನೀಡಿರುವ ಎಚ್ಚರಿಕೆ ಬಗ್ಗೆ ಹಾಗೂ ರಾಜ್ಯದಲ್ಲಿ ಕೊರೊನಾ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿ ರುವ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ನಂತರ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಕೈಬಿಡುವ ನಿರ್ಧಾರ ಕೈಗೊಂಡರು.

ನಂತರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ನ್ಯಾಯಾಲಯದ ಅಭಿಪ್ರಾಯಕ್ಕೆ ಗೌರವ ಕೊಟ್ಟು ಮೇಕೆದಾಟು ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಮುಂದೂಡಲು ತೀರ್ಮಾನಿಸಿದ್ದೇವೆ ಎಂದರು.

ಈ ಹೋರಾಟ ಪೂರ್ಣ ಪ್ರಮಾಣದಲ್ಲಿ ನಿಂತಿಲ್ಲ, ಜನರಿಗೆ ಕುಡಿಯುವ ನೀರು ನೀಡುವ ಬದ್ಧತೆಯನ್ನು ಪಕ್ಷ ಕಾಯ್ದುಕೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಇದೇ ರಾಮನಗರದಿಂದ ಪಾದಯಾತ್ರೆ ಮುಂದುವರಿಸಲಾಗುತ್ತದೆ ಎಂದು ತಿಳಿಸಿದರು.

ಪಾದಯಾತ್ರೆ ನಿಲ್ಲಿಸುವಂತೆ ಸರ್ಕಾರ ನೋಟಿಸ್ ಜಾರಿ ಮಾಡಿದೆ. ಆದರೆ, ನಮ್ಮ ಜಿಲ್ಲಾಧ್ಯಕ್ಷರಿಗೆ ನೀಡಿದ ಅನುಮತಿ ಯಲ್ಲಿ ಜನರಿಗೆ ತೊಂದರೆಯಾಗದಂತೆ ಪಾದಯಾತ್ರೆ ಮಾಡಿ ಎಂದು ಹೇಳಲಾಗಿತ್ತು. ಪೊಲೀಸರಿಗೆ ಬರೆದ ಪತ್ರದಲ್ಲಿ ವ್ಯವಸ್ಥಿತವಾಗಿ ಅವಕಾಶ ಮಾಡಿಕೊಡಿ ಎಂದೂ ಹೇಳಿತ್ತು. ಆ ಮೂಲಕ ಈ ಪಾದಯಾತ್ರೆ ನಡೆಯಲಿ ಎಂಬ ಆಸೆ ಸರ್ಕಾರಕ್ಕೂ ಇದೆ. ಆದರೂ, ನಿಮ್ಮ ಮುಂದೆ ಬೇರೆಯದೇ ಹೇಳುತ್ತಿದ್ದಾರೆ ಎಂದು ಶಿವಕುಮಾರ್ ತಿಳಿಸಿದರು.

ಶಾಸಕಾಂಗ ಪಕ್ಷದ ನಾಯಕರು, ಮುಖಂಡರ ಒಟ್ಟಾರೆ ಅಭಿಪ್ರಾಯ, ಜನರ ಭಾವನೆ ಕುರಿತು ನಮ್ಮ ಶಾಸಕರ ಜತೆ ಚರ್ಚೆ ಮಾಡಿದೆವು. ನ್ಯಾಯಾಲಯ ನಮಗೆ ಪಾದಯಾತ್ರೆ ಮಾಡಬೇಡಿ ಎಂದು ಹೇಳದಿದ್ದರೂ, ನ್ಯಾಯಾಲಯದ ಅಭಿಪ್ರಾಯಕ್ಕೆ ಗೌರವದಿಂದ ಮನ್ನಣೆ ನೀಡಿ, ನಮ್ಮ ದೇವರುಗಳಾದ ಜನರ ಭಾವನೆ ನೋಡಿ ಈ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಮುಂದೂಡುತ್ತಿದ್ದೇವೆ ಎಂದವರು ಹೇಳಿದ್ದಾರೆ.

## ಮಲೇಬೆನ್ನೂರಿನ ಸಿಓ ಆಗಿ ರುಕ್ಮಿಣಿ



ಮಲೇಬೆನ್ನೂರು, ಜ.13- ಇಲ್ಲಿನ ಪುರಸಭೆಯ ಮುಖ್ಯಾಧಿಕಾರಿಯಾಗಿ ಶ್ರೀಮತಿ ರುಕ್ಮಿಣಿ ಅವರು ಗುರುವಾರ ಹಾಲಿ ಮುಖ್ಯಾಧಿಕಾರಿ ಎನ್.ಕೆ. ಡೊಂಬರ್ ಅವರಿಂದ ಅಧಿಕಾರ ಸ್ವೀಕರಿಸಿದರು.

ರುಕ್ಮಿಣಿ ಅವರು ಈವರೆಗೂ ರಾಣೇಬೆನ್ನೂರು ನಗರಸಭೆಯಲ್ಲಿ ಆರೋಗ್ಯ ನಿರೀಕ್ಷಕರಾಗಿದ್ದರು. ವರ್ಗಾವಣೆಗೊಂಡಿರುವ ಡೊಂಬರ್ ಅವರಿಗೆ ಸ್ಥಳ ತೋರಿಸಿಲ್ಲ. ರುಕ್ಮಿಣಿ ಅವರು ಅಧಿಕಾರ ವಹಿಸಿಕೊಳ್ಳುವ ವೇಳೆ ಉಪತಹಶೀಲ್ದಾರ್ ಆರ್. ರವಿ, ಪುರಸಭೆಯ ಸದಸ್ಯ ಬಿ. ಮಂಜುನಾಥ್, ಪುರಸಭೆ ಅಧಿಕಾರಿ ಗಣೇಶ್‌ರಾವ್ ಹಾಜರಿದ್ದರು.

## ಹರಿಹರ ಮತ್ತು ಚನ್ನಗಿರಿಗೆ ಇಂದು ಎಸಿಬಿ ಅಧಿಕಾರಿಗಳ ಭೇಟಿ

ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧಿಕಾರಿಗಳು ಹರಿಹರ ಹಾಗೂ ಚನ್ನಗಿರಿಗೆ ಇಂದು ಭೇಟಿ ನೀಡಲಿದ್ದಾರೆ ಎಂದು ಎಸಿಬಿ ಡಿವೈಎಸ್‌ಪಿ ಆರ್. ಮಂಜುನಾಥ್ ತಿಳಿಸಿದ್ದಾರೆ.

ಎಸಿಬಿ ಪೊಲೀಸ್ ಅಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಹರಿಹರ ಮತ್ತು ಚನ್ನಗಿರಿಯ ಪ್ರವಾಸಿ ಮಂದಿರದಲ್ಲಿ ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದು-ಕೊರತೆ, ದೂರು, ಅಹವಾಲು ಸ್ವೀಕರಿಸುವರು. ವಿವರಕ್ಕೆ ಸಂಪರ್ಕಿಸಿ : 08192-236600, 9480806227, 9480806283, 9480806284.

## ಉಕ್ಕಡಗಾತ್ರಿಯಲ್ಲಿ ಇಂದು - ನಾಳೆ ಸಂಕ್ರಾಂತಿ, ಹುಣ್ಣಿಮೆ ಪೂಜೆ ಇಲ್ಲ

ಕೊರೊನಾ 3ನೇ ಅಲೆ ಹಿನ್ನೆಲೆಯಲ್ಲಿ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಇಂದು ಮತ್ತು ನಾಳೆ ಮಕರ ಸಂಕ್ರಾಂತಿ ಮತ್ತು ಹುಣ್ಣಿಮೆಯ ವಿಶೇಷ ಪೂಜಾ ಕಾರ್ಯಕ್ರಮ ಹಾಗೂ ಪ್ರಸಾದದ ವ್ಯವಸ್ಥೆ ಇರುವುದಿಲ್ಲ ಎಂದು ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ. ಭಕ್ತರು ತಾತ್ಕಾಲಿಕವಾಗಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದುಗೆ ದರ್ಶನಕ್ಕೆ ಬರುವುದನ್ನು ಮುಂದೂಡುವಂತೆ ಸುರೇಶ್ ಮನವಿ ಮಾಡಿದ್ದಾರೆ.

# ಮಕ್ಕಳಲ್ಲಿ ಹೆಚ್ಚಾಗುತ್ತಿರುವ ಸೋಂಕು ಶಾಲೆಗೆ ಕಳುಹಿಸಲು ಪೋಷಕರು ಹಿಂದೇಟು

## ಸೋಂಕಿನ ಬಗ್ಗೆ ಭಯಬೇಡ, ಜಾಗೃತಿ ವಹಿಸಿ ಮಕ್ಕಳ ತಜ್ಞ ಡಾ. ಶ್ರೀನಿವಾಸ್ ಸಲಹೆ

ಮಲೇಬೆನ್ನೂರು, ಜ.13- ದಾವಣಗೆರೆ ಜಿಲ್ಲೆಯಲ್ಲಿ ಕಳೆದ 3 ದಿನಗಳಿಂದ ಮಕ್ಕಳಲ್ಲಿ ಕೊರೊನಾ ಸೋಂಕು ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಪೋಷಕರು ಆತಂಕಗೊಂಡು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಮಾವಿನಹೊಳೆ ಇಂದಿರಾ ವಸತಿ ಶಾಲೆಯಲ್ಲಿ ಕೊರೊನಾ ಸ್ಫೋಟಗೊಂಡ ನಂತರ ಜಗಳೂರು ಮತ್ತು ದಾವಣಗೆರೆ ನಗರದ ಕೆಲ ಶಾಲೆಗಳ ವಿದ್ಯಾರ್ಥಿಗಳಲ್ಲಿ ಸೋಂಕು ಕಂಡು ಬಂದಿದ್ದು, ಗುರುವಾರ ಸಂಜೆ ಮಾಹಿತಿ ಪ್ರಕಾರ ಇದುವರೆಗೆ ಜಿಲ್ಲೆಯಲ್ಲಿ 18 ವರ್ಷದೊಳಗಿನ 83 ಮಕ್ಕಳಿಗೆ ಸೋಂಕು ತಗುಲಿದೆ.

ಮಾವಿನಹೊಳೆ ವಸತಿ ಶಾಲೆಯ 53 ಮಕ್ಕಳ ಪೈಕಿ 6 ಮಕ್ಕಳು ಮಾತ್ರ ಚನ್ನಗಿರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಉಳಿದೆಲ್ಲಾ ಮಕ್ಕಳು, ಪ್ರಾಚಾರ್ಯರು ಹಾಸ್ಟೆಲ್‌ನಲ್ಲಿಯೇ ಇದ್ದಾರೆ. ಅವರಿಗೆಲ್ಲಾ ಲಘು ಪ್ರಮಾಣ ರೋಗ ಲಕ್ಷಣಗಳು ಇರುವುದರಿಂದ ಅಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ.

ಜಿಲ್ಲೆಯಲ್ಲಿ ಇದುವರೆಗೆ ಪತ್ತೆಯಾಗಿರುವ ಕೊರೊನಾ ಸೋಂಕಿತರ ಪೈಕಿ ಶೇ. 85 ರಿಂದ 90 ರಷ್ಟು ಜನರು ರೋಗಲಕ್ಷಣ ರಹಿತವಾಗಿದ್ದಾರೆ.



ಸಿ.ಜಿ. ಆಸ್ಪತ್ರೆಯಲ್ಲಿ 25 ಜನ ಮಾತ್ರ ಸಾಮಾನ್ಯ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್ 'ಜನತಾವಾಣಿ'ಗೆ ತಿಳಿಸಿದ್ದಾರೆ. ಗುರುವಾರ ಜಿಲ್ಲೆಯಲ್ಲಿ ಸೋಂಕು ದೃಢಪಟ್ಟಿರುವ 92 ಜನರಲ್ಲಿ 12 ಮಕ್ಕಳಿದ್ದಾರೆ.

ಶಾಲೆಗಳಲ್ಲಿ ಕೇವಲ ಥರ್ಮಲ್ ಸ್ಕ್ಯಾನಿಂಗ್ ಮಾಡುತ್ತಿದ್ದು, ಇದರಿಂದ ಜ್ವರ ಮಾತ್ರ ಗೊತ್ತಾಗುತ್ತದೆ. ಶೀತ, ಕೆಮ್ಮು ಇದ್ದವರನ್ನು ಶಾಲೆಗೆ ಕರೆದುಕೊಳ್ಳಬಾರದು. ಸಂಪೂರ್ಣ ಆರೋಗ್ಯವಾಗಿರುವ ಮಕ್ಕಳನ್ನು ಮಾತ್ರ ಶಾಲೆಗೆ ಕರೆದುಕೊಳ್ಳಬೇಕು.

ಸ್ವಲ್ಪ ಶೀತ, ಜ್ವರ, ಕೆಮ್ಮು ಇದ್ದರೂ ಪೋಷಕರು ನಿರ್ಲಕ್ಷ್ಯ ಮಾಡದೆ ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಬೇಕು. 2 ದಿನಗಳಲ್ಲಿ ಕಡಿಮೆಯಾಗದಿದ್ದರೆ ತಕ್ಷಣ ಕೋವಿಡ್ ಟೆಸ್ಟ್ ಮಾಡಿಸಬೇಕು. ಈ ಕೊರೊನಾ ಬಹಳ ಸೌಮ್ಯವಾದ ಲಕ್ಷಣ ಹೊಂದಿರುವುದರಿಂದ ಪೋಷಕರು ಆತಂಕಗೊಳ್ಳಬಾರದು ಮತ್ತು ಜನರು ಮನೆಯಿಂದ ಹೊರಬರುವಾಗ ಕಡ್ಡಾಯವಾಗಿ ಮಾಸ್ಕ್ ಬಳಸುವಂತೆ ಡಾ. ರಾಘವನ್ ಮನವಿ ಮಾಡಿದ್ದಾರೆ.

ಮಕ್ಕಳಲ್ಲಿ ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಬಗ್ಗೆ 'ಜನತಾವಾಣಿ' ಯೊಂದಿಗೆ ಮಾತನಾಡಿದ ಮಲೇಬೆನ್ನೂರಿನ ಆದಿತ್ಯ ಮಕ್ಕಳ ಆಸ್ಪತ್ರೆಯ ವೈದ್ಯ ಡಾ. ಶ್ರೀನಿವಾಸ್ ಅವರು, ಚಳಿಗಾಲ ಆಗಿರುವುದರಿಂದ ಮಕ್ಕಳು ಸೇರಿದಂತೆ, ದೊಡ್ಡವರಲ್ಲಿಯೂ ಶೀತ, ಜ್ವರ, ಕೆಮ್ಮು ಹೆಚ್ಚಾಗಿ ಕಂಡುಬರುತ್ತಿದೆ. ಭಯ ಬೇಡ, ಆದರೆ ಈ ಬಗ್ಗೆ ಯಾರೂ ನಿರ್ಲಕ್ಷ್ಯ ಮಾಡದೆ ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಳ್ಳಬೇಕು. ಕಡಿಮೆ ಆಗದಿದ್ದರೆ ಕೂಡಲೇ ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳಬೇಕು ಎಂದರು.

ಶಾಲೆ ಬಸ್‌ಗಳಲ್ಲಿ ಮಕ್ಕಳನ್ನು ತುಂಬಿಕೊಂಡು ಹೋಗಲಾಗುತ್ತಿದ್ದು, ಅಲ್ಲಿ ಸಾಮಾಜಿಕ ಅಂತರ ಇರುತ್ತಿಲ್ಲ ಮತ್ತು ಶಾಲೆಗಳಲ್ಲಿ ಮಕ್ಕಳು ಕುಳಿತುಕೊಳ್ಳುವಾಗಲೂ ಅಂತರಕ್ಕೆ ಹೆಚ್ಚು ಒತ್ತು ಕೊಡಬೇಕು. ಮಾಸ್ಕ್, ಸ್ಯಾನಿಟೈಸ್‌ಗಳನ್ನು ಎಲ್ಲರೂ ಕಡ್ಡಾಯವಾಗಿ ಬಳಸಬೇಕು. ಮನೆಯಲ್ಲಿ ಮಕ್ಕಳಿರುವ ಪೋಷಕರು ಸದಾ ಜಾಗೃತಿ ವಹಿಸಬೇಕು. ಸದ್ಯ ಯಾರೂ ಎಲ್ಲಿಗೂ ಪ್ರವಾಸ ಹೋಗಬೇಡಿ ಎಂದು ಡಾ. ಶ್ರೀನಿವಾಸ್ ಪೋಷಕರಲ್ಲಿ ಮನವಿ ಮಾಡಿದ್ದಾರೆ.

## ರಾಣೇಬೆನ್ನೂರು: ಶ್ರದ್ಧಾ - ಭಕ್ತಿಯಿಂದ ವೈಕುಂಠ ಏಕಾದಶಿ ಆಚರಣೆ



ರಾಣೇಬೆನ್ನೂರು, ಜ.13- ಇಲ್ಲಿನ ವಾಗೀಶ ನಗರದಲ್ಲಿನ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಗುರುವಾರ ವೈಕುಂಠ ಏಕಾದಶಿಯನ್ನು ಕೋವಿಡ್ ನಿಯಮ ಪಾಲನೆಯೊಂದಿಗೆ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು.

ಈ ದಿವಸ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂಬ ಪ್ರತೀತಿ ಹಿನ್ನೆಲೆಯಲ್ಲಿ ದೇವಸ್ಥಾನ ಬಳಿ ಸ್ವರ್ಗದ ಮಾದರಿಯ ಮಂಟಪ ನಿರ್ಮಿಸಲಾಗಿತ್ತು. ಭಕ್ತರು ಮಂಟಪದ ಮೂಲಕ ಸಾಗಿಬಂದು ಅದರ ಎದುರಿನ ಕಟ್ಟೆಯ ಮೇಲೆ ದೇವರ ದರ್ಶನ ಮಾಡಲು ವ್ಯವಸ್ಥೆ ಮಾಡಲಾಗಿತ್ತು. ದರ್ಶನದ ನಂತರ ಆಗಮಿಸಿದ ಭಕ್ತರಿಗೆ ತಿರುಪತಿ ಮಾದರಿ ಲಡ್ಡುವನ್ನು ಪ್ರಸಾದ ರೂಪದಲ್ಲಿ ವಿತರಿಸಲಾಯಿತು.

ಗೋವಿಂದ ಚಿಮ್ಮಲಗಿ ನೇತೃತ್ವದ ಅರ್ಚಕರ ತಂಡ ಪೂಜಾ ಕಾರ್ಯಗಳನ್ನು ನೆರವೇರಿಸಿದರು.

ದೇವಸ್ಥಾನ ಕಮಿಟಿ ಅಧ್ಯಕ್ಷ ನಾಗರಾಜ ರಾಯಚೂರ, ಅರಣ್ಯ, ಕೈಗಾರಿಕೆ ನಿಗಮದ ಸದಸ್ಯೆ ಭಾರತಿ ಜಂಬಗಿ, ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ನಿರ್ದೇಶಕ ಸಂತೋಷಕುಮಾರ ಪಾಟೀಲ, ತಹಶೀಲ್ದಾರ್ ಜಿ.ಎಸ್. ಶಂಕರ್, ಜಿಪಂ ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ, ವೆಂಕಟೇಶ ಬಣಕಾರ, ನಾಗರಾಜ ಗೌಡ್ರು, ವೆಂಕಟೇಶ ಬಸ್ತಿಪಾಡ, ಅಶೋಕ ಅರೆಪಲ್ಲಿ, ಹನುಮಂತಪ್ಪ ಅರೆಪಲ್ಲಿ, ಚಂದ್ರು ರಾಯಚೂರ, ಗುರುರಾಜ ಕೆ., ಶ್ರೀನಿವಾಸ ರಾಯಚೂರ, ಗುರುರಾಜ ರಾಯಚೂರ, ಎ.ಸುಬ್ರಮಣ್ಯ, ಪುಟ್ಟಪ್ಪ ಕಿರಿಗೇರಿ, ರವಿ ಕಿರಿಗೇರಿ, ಶ್ರೀಕಾಂತ ರಾಯಚೂರ, ಮಲ್ಲೇಶಪ್ಪ ಮಾದರ, ಕೆ.ಡಿ.ಸಾವಕಾರ ಸೇರಿದಂತೆ ಸಹಸ್ರಾರು ಭಕ್ತಾದಿಗಳು ದೇವರ ದರ್ಶನ ಪಡೆದುಕೊಂಡರು.

# ಜಗಳೂರಿನಲ್ಲಿ ವೇತನ ಹೆಚ್ಚಳಕ್ಕಾಗಿ ಆಗ್ರಹಿಸಿ ಎಐಟಿಯುಸಿ ಮನವಿ

ಜಗಳೂರು, ಜ.13- ವೇತನ ಹೆಚ್ಚಿಸಲು ಒತ್ತಾಯಿಸಿ ಎಐಟಿಯುಸಿ ಸಂಯೋಜಿತ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ ಕಾರ್ಯಕರ್ತರು ತಹಶೀಲ್ದಾರ್ ಮುಖಾಂತರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.


ಸಂಘಟನೆ ತಾಲ್ಲೂಕು ಅಧ್ಯಕ್ಷ ಮಹಮ್ಮದ್ ಭಾಷಾ ಮಾತನಾಡಿ, ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಕಳೆದ 19 ವರ್ಷಗಳಿಂದ ಸರ್ಕಾರಿ, ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಬಿಸಿಯೂಟ ತಯಾರಕರು ಕೆಲಸ ನಿರ್ವಹಿಸುತ್ತಿದ್ದು, ಜೀವನ ಭದ್ರತೆಯಿಲ್ಲದೆ ನಲುಗುತ್ತಿದ್ದಾರೆ. ಅವರಿಗೆ ಯಾವುದೇ ಭದ್ರತೆ ಇಲ್ಲ ಎಂದು ದೂರಿದರು.

ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ್ ಮಾತನಾಡಿ, 60 ವರ್ಷ ವಯೋಮಾನ ಮೀರಿ ನಿವೃತ್ತಿಯಾದವರಿಗೆ ರೂ. 2 ಲಕ್ಷ ಇಡಿಗಂಟು ನೀಡಬೇಕು. ಮಾಸಿಕ ಪಿಂಚಣಿ ರೂ.3 ಸಾವಿರ ಜಾರಿಗೊಳಿಸಬೇಕು. ಖಾಸಗಿ ಸಂಸ್ಥೆಯವರಿಗೆ ವಹಿಸುವ ನಿರ್ಧಾರ ಕೈಬಿಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಪದಾಧಿಕಾರಿಗಳಾದ ಚನ್ನಮ್ಮ, ಮೀನಾಕ್ಷಿ, ವೀರಣ್ಣ, ತಿಪ್ಪೇಸ್ವಾಮಿ, ವೀಣಾ, ಉಮಾದೇವಿ, ರತ್ನಮ್ಮ, ಸರೋಜ, ಸುಮ, ಮತ್ತಿತರರು ಭಾಗವಹಿಸಿದ್ದರು.



## ಕೊಮಾರನಹಳ್ಳಿ : ಏಕಾದಶಿ ಪ್ರಯುಕ್ತ ಆಂಜನೇಯ ಸ್ವಾಮಿಗೆ ತಿಮ್ಮಪ್ಪನ ಅಲಂಕಾರ



ಮಲೇಬೆನ್ನೂರು, ಜ. 13- ಕೊಮಾರನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿಗೆ ಗುರುವಾರ ವೈಕುಂಠ ಏಕಾದಶಿ ಪ್ರಯುಕ್ತ ಮಾಡಲಾಗಿದ್ದ ತಿರುಪತಿ ತಿಮ್ಮಪ್ಪನ ಅವತಾರದ ವಿಶೇಷ ಅಲಂಕಾರ ಭಕ್ತರ ಮನ ಸೆಳೆಯಿತು.

## ಕೆಂಚನಹಳ್ಳಿ ಗ್ರಾಮದ ಕೆ.ಹೆಚ್ ಮಹೇಶ್ವರಪ್ಪ ನಿಧನ



ಹರಿಹರ ತಾಲ್ಲೂಕು ಕೆಂಚನಹಳ್ಳಿ ಗ್ರಾಮದ
ಕೆ.ಹೆಚ್. ನಾಗರಾಜಪ್ಪನವರ ಸಹೋದರರಾದ ರೈತ ಸಂಘದ ಮುಖಂಡ
**ಹೊಳಲು ಕೆ.ಹೆಚ್. ಮಹೇಶ್ವರಪ್ಪ** (55 ವರ್ಷ)
ಅವರು ದಿನಾಂಕ 13.01.2022ರ ಗುರುವಾರ ಮಧ್ಯಾಹ್ನ 1.15ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.01.2022ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕೆಂಚನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

**ದುಃಖತಪ್ತರು:**
**ಮೃತರ ಪತ್ನಿ ಮಂಗಳಮ್ಮ ಮಹೇಶ್ವರಪ್ಪ, ಪುತ್ರರಾದ ಪವನ್, ಮಧು ಮತ್ತು ಹೊಳಲು ವಂಶಸ್ಥರು ಹಾಗೂ ಬಂಧು-ಮಿತ್ರರು, ಕೆಂಚನಹಳ್ಳಿ ಗ್ರಾಮಸ್ಥರು.**

## ಕೆ.ಎನ್ ಹಳ್ಳಿ ಗ್ರಾಮದ ಹನುಮಂತಪ್ಪ ನಿಧನ



ಹರಿಹರ ತಾ. ಕಡಾರನಾಯ್ಕನಹಳ್ಳಿ ಗ್ರಾಮದ ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷರೂ, ನಾಯಕ ಸಮಾಜದ ಮುಖಂಡರೂ ಆದ ಶ್ರೀ ಭಾನುವಳ್ಳಿ ಹನುಮಂತಪ್ಪ (77ವರ್ಷ) ಅವರು ದಿನಾಂಕ 13.01.2022ರ ಗುರುವಾರ ಸಾಯಂಕಾಲ 5 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.01.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಕೆ.ಎನ್. ಹಳ್ಳಿಯಲ್ಲಿ ನೆರವೇರಲಿದೆ.

## ಶತಾಯುಷಿ ಮುದ್ದಾಬಳ್ಳಿ ಮಠದ ಗುರುಸಿದ್ದಮ್ಮ ನಿಧನ



ದಾವಣಗೆರೆ ಸಿಟಿ ವಿಜಯನಗರ ಬಡಾವಣೆ ವಾಸಿ, ನಿವೃತ್ತ ಶಿಕ್ಷಕರಾದ ದಿ. ಮುದುಕಪ್ಪಯ್ಯನವರ ಧರ್ಮಪತ್ನಿ ಮುದ್ದಾಬಳ್ಳಿ ಮಠದ ಗುರುಸಿದ್ದಮ್ಮ (100) ಇವರು ದಿನಾಂಕ 13.01.2022ರ ಗುರುವಾರ 11.55ಕ್ಕೆ ನಿಧನರಾದರು. ಆರು ಜನ ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.1.2022ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮ ಹೂವಿಹಡಗಲಿ ತಾಲ್ಲೂಕು, ದೇವಗೊಂಡನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

# ಟೆಸ್ಟ್, ಬೂಸ್ಟರ್ ಡೋಸ್ ಹೆಚ್ಚಿಸಲು ಗಡುವು

(1ನೇ ಪುಟದಿಂದ) ಹಾಗೂ ಜನಸಂದಣಿ ತಡೆಗೆ ಕ್ರಮ ತೆಗೆದುಕೊಳ್ಳಬೇಕು. ಸಾರಿಗೆ ಹಾಗೂ ಪೊಲೀಸ್ ಅಧಿಕಾರಿಗಳು ಜೊತೆಯಾಗಿ ಹೊರಗಿನಿಂದ ಬರುವವರ ಮೇಲೆ ನಿಗಾ ವಹಿಸಿ, ಅವರು ಮನೆಯಲ್ಲೇ ಕ್ವಾರಂಟೈನ್ ಆಗುವಂತೆ ನೋಡಿಕೊಳ್ಳಬೇಕೆಂದು ಸಚಿವರು ಸೂಚನೆ ನೀಡಿದರು.

ಜಗಳೂರಿನಲ್ಲಿ ಇದೇ ಮೊದಲ ಬಾರಿಗೆ ಕೊರೊನಾ ಪಾಸಿಟಿವ್ ದರ ಶೇ.5ಕ್ಕೆ ತಲುಪಿದೆ. ಹೊರ ರಾಜ್ಯದಿಂದ ಬಂದವರೇ ಇದಕ್ಕೆ ಕಾರಣರಾಗಿದ್ದಾರೆ. ಈ ಬಗ್ಗೆ ನಿಗಾ ವಹಿಸಿ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕೊರೊನಾ ಪ್ರಕರಣಗಳು ಹೆಚ್ಚಾದರೆ ಸಮಾಜ ಕಲ್ಯಾಣ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ಪಂಗಡ ಇಲಾಖೆಗಳ ವಸತಿ ನಿಲಯಗಳನ್ನು ಕೋವಿಡ್ ಕೇರ್ ಸೆಂಟರ್‌ಗಳಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ್ ಮಾತನಾಡಿ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ವೈಯಕ್ತಿಕ ಕೆಲಸಗಳಿಗೆ ಒತ್ತು ನೀಡಲಾಗುತ್ತಿದೆ. ಗುಂಪು ಕೆಲಸಗಳಿದ್ದಾಗಲೂ 40ಕ್ಕಿಂತ ಹೆಚ್ಚು ಜನರು ಇರದಂತೆ ನೋಡಿಕೊಳ್ಳಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಡಿ.ಹೆಚ್.ಓ. ಡಾ. ನಾಗರಾಜ್, ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ಜಿ. ರಾಘವನ್ ಮತ್ತಿತರರು ಉಪಸ್ಥಿತರಿದ್ದರು.

### ಮೊದಲ ಡೋಸ್‌ನಲ್ಲಿ ಶೇ.101ರ ಸಾಧನೆ

ಜಿಲ್ಲೆಯಲ್ಲಿ 18 ವರ್ಷ ಮೀರಿದ 12.23 ಲಕ್ಷ ಜನರಿದ್ದಾರೆ. ಗುರಿ ಮೀರಿ 12.37 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ ಎಂದು ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ ತಿಳಿಸಿದರು.
ಇರುವ ಜನರಿಗಿಂತ ಹೆಚ್ಚು ಲಸಿಕೆ ನೀಡಲು ಹೇಗೆ ಸಾಧ್ಯ? ಎಂಬ ಸಚಿವ ಭೈರತಿ ಬಸವರಾಜ ಅವರ ಪ್ರಶ್ನೆಗೆ ಉತ್ತರಿಸಿದ ಮೀನಾಕ್ಷಿ, ತಂತ್ರಾಂಶದಲ್ಲಿರುವ ಲೋಪದಿಂದಾಗಿ 18 ವರ್ಷದವರಿಗೆ ನೀಡಲಾಗುವ ಲಸಿಕೆಯೂ 18 ವರ್ಷ ಮೀರಿದವರ ಸಾಲಿಗೆ ಸೇರ್ಪಡೆಯಾಗುತ್ತಿದೆ. ಹೀಗಾಗಿ ಲೆಕ್ಕದಲ್ಲಿ ಏರಿಕೆಯಾಗಿದೆ. ಈ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗಿದೆ ಎಂದರು.

### 6 ಶಾಲೆಗಳಲ್ಲಿ ಸೋಂಕು

ಒಂದು ಶಾಲೆಗೆ ಕೊರೊನಾ ಬಂದರೆ ಇಡೀ ತಾಲ್ಲೂಕಿನ ಶಾಲೆಗಳನ್ನು ಮುಚ್ಚುವ ಅಗತ್ಯವಿಲ್ಲ. ಕೊರೊನಾ ಕಂಡು ಬಂದ ಶಾಲೆಯನ್ನು ಒಂದು ವಾರ ಕಾಲ ಮುಚ್ಚಲಾಗು ವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ. ವಿದ್ಯಾರ್ಥಿಯೊಬ್ಬರಲ್ಲಿ ಕೊರೊನಾ ಕಂಡು ಬಂದರೆ, ಇಡೀ ಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯನ್ನು ಟೆಸ್ಟ್ ಮಾಡಲಾಗುವುದು. ವಾರದ ನಂತರ ಇನ್ನೊಮ್ಮೆ ಟೆಸ್ಟ್ ಮಾಡಿ ಶಾಲೆಯ ಆರಂಭಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ ಜಿಲ್ಲೆಯಲ್ಲಿ ಇದುವರೆಗೂ 6 ಶಾಲೆಗಳಲ್ಲಿ ಕೊರೊನಾ ಸೋಂಕು ಕಂಡು ಬಂದಿದೆ ಎಂದರು.

## ವೈಕುಂಠ ಏಕಾದಶಿ ಪ್ರಯುಕ್ತ ಸಾಯಿಬಾಬಾ ಮಂದಿರದಲ್ಲಿ ಪೂಜೆ




ಹರಿಹರ, ಜ.13- ನಗರದ ಪಾಟೀಲ್ ಬಡಾವಣೆಯ ಶ್ರೀ ಸಾಯಿಬಾಬಾ ಮಂದಿರದಲ್ಲಿ ವೈಕುಂಠ ಏಕಾದಶಿ ನಿಮಿತ್ತವಾಗಿ ಶ್ರೀ ಸಾಯಿಬಾಬಾ, ವಿನಾಯಕ, ಕಾಶಿ ವಿಶ್ವನಾಥ ಮೂರ್ತಿಗಳಿಗೆ ವಿಶೇಷ ಅಭಿಷೇಕ, ಹೂವಿನ ಅಲಂಕಾರ, ಮಹಾಮಂಗಳಾರತಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಬಸವರಾಜ್ ಪಾಟೀಲ್, ಉಪಾಧ್ಯಕ್ಷ ಸುರ್ವೆ ಹನುಮಂತಪ್ಪ, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಬ್ಯಾಂಕ್ ರಾಮಣ್ಣ, ಸರಪದ, ಸಂಗನಾಳ ಮಠ್, ಅರ್ಚಕ ಕುಮಾರ ಸ್ವಾಮಿ ಉಪಸ್ಥಿತರಿದ್ದರು.

## ಇನ್ನರ್‌ವ್ಹೀಲ್ ದಿನಾಚರಣೆ



ದಾವಣಗೆರೆ, ಜ. 13- ನಗರದ ವಿದ್ಯಾನಗರ ಕ್ಲಬ್‌ನಲ್ಲಿ ಇನ್ನರ್ ವ್ಹೀಲ್ ದಿನವನ್ನು ಆಚರಿಸಲಾಯಿತು. ಅಧ್ಯಕ್ಷರಾದ ಗಿರಿಜಾ ಬಿಲ್ಲಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಿಡ್‌ಟೌನ್ ಮಾಜಿ ಅಧ್ಯಕ್ಷೆ ಮಂಜುಳಾ ವೀರಣ್ಣ, ಇನ್ನರ್‌ವ್ಹೀಲ್ ಸಂಸ್ಥಾಪಕ ಅಧ್ಯಕ್ಷರಾದ ಸುಲೋಚನಾ ಮಾಗನೂರು ರಾಜಶೇಖರ್, ಪಾಲಿಕೆ ಸದಸ್ಯರುಗಳಾದ ಗೀತಾ ದಿಳ್ಯಪ್ಪ, ವೀಣಾ ನಂಜಪ್ಪ, ಗೌರಮ್ಮ ಗಿರೀಶ್ ಉಪಸ್ಥಿತರಿದ್ದರು.

ನಿರ್ಮಲಾ ಮಹೇಶ್ವರಪ್ಪ, ಸುಲೋಚನ ಮಾಗನೂರು, ಮಂಜುಳಾ ವೀರಣ್ಣ, ಹಿರಿಯ ಸದಸ್ಯರುಗಳಾದ ಸಾವಿತ್ರಮ್ಮ ಸಿದ್ದಪ್ಪ, ನಾಗೇಂದ್ರಮ್ಮ ಪರಮೇಶ್ವರಪ್ಪ, ಜಯಶೀಲ ಹೆಚ್ಚಿನ್ನೆಸ್, ರತ್ನಮ್ಮ ರಂಗನಾಥ್, ನಾಗರತ್ನ ಶಿವಶಂಕರ್, ಸುವರ್ಣ ಶಿವಮೂರ್ತಿ, ಸಾವಿತ್ರ ನೆಸ್ವಿ, ಪ್ರೇಮ ಮಹೇಶ್ವರಪ್ಪ, ವಿಜಯ ಕಡೇಕೊಪ್ಪ, ರೇಣುಕಾ ಗುರುರಾಜ್, ಭಾಗ್ಯ ವೀರಣ್ಣ ಉಪಸ್ಥಿತರಿದ್ದರು.

ಸುಜಾತ ಆಚಾರ್ ಸ್ವಾಗತಿಸಿದರು. ನಿರ್ಮಲಾ ನಾಗರಾಜಚಾರ್ ನಿರೂಪಿಸಿದರು. ಕಾರ್ಯದರ್ಶಿ ರತ್ನ ಪಾಟೀಲ್ ವಂದಿಸಿದರು. ಈ ಸಂದರ್ಭದಲ್ಲಿ 60 ವರ್ಷ ತುಂಬಿದ ಸದಸ್ಯರಿಗೆ ಸನ್ಮಾನಿಸಿ, ಗೌರವಿಸಲಾಯಿತು.

## ಸಿದ್ಧಗಂಗಾ ಸಾಧನೆ; ಲಕ್ಷ ದಾಟಿದ ಯೂಟ್ಯೂಬ್ ಸಬ್‌ಸ್ಕೈಬರ್ಸ್ !

ದಾವಣಗೆರೆ, ಜ.13- ನಗರದ ಶ್ರೀ ಸಿದ್ಧಗಂಗಾ ಸಂಸ್ಥೆಯ ಸಿದ್ಧಗಂಗಾ ಸ್ಕೂಲ್ ಯೂಟ್ಯೂಬ್ ಚಾನೆಲ್ಸ್ ಸಬ್‌ಸ್ಕೈಬರ್ಸ್ ಸಂಖ್ಯೆ ಲಕ್ಷ ದಾಟಿದೆ. ಯೂಟ್ಯೂಬ್ ಪ್ರಶಸ್ತಿ ಪಡೆಯುವ ಹಂತ ತಲುಪಿ ಜಿಲ್ಲೆಯಲ್ಲಿ ದಾಖಲೆ ಸ್ಥಾಪಿಸಿದೆ.

ಒಂದನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಎಲ್ಲ ವಿಷಯಗಳ ವಿಡಿಯೋಗಳು ಮಕ್ಕಳಿಗೆ ಲಭ್ಯವಾಗುವಂತೆ ಮಾಡಿದೆ. ಪಿಯುಸಿ ಪಠ್ಯಕ್ರಮದ ಜೊತೆಗೆ ನೀಟ್, ಸಿಇಟಿ, ಜೆಇಇ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೋಧನೆ ಮತ್ತು ಪ್ರಶ್ನೆಪತ್ರಿಕೆಯನ್ನು ಬಿಡಿಸಿದ ವಿಧಾನ, ಹೊರರಾಜ್ಯದ ವಿದ್ಯಾರ್ಥಿಗಳಿಗೂ ತಲುಪುವಂತಾಗಿರುವುದು ಸಿದ್ಧಗಂಗಾ ಪ್ರಾಧ್ಯಾಪಕರ ಯಶಸ್ಸಿನ ಕಿರೀಟಕ್ಕೆ ಗರಿ ಮೂಡಿಸಿದೆ.

ಸಂಸ್ಥೆಯ ಅಧ್ಯಕ್ಷ ಪ್ರಶಾಂತ್ ನೇತೃತ್ವದಲ್ಲಿ 15 ಟೆಕ್ನೀಷಿ ಯನ್ಸ್, 157 ಬೋಧಕರು, 6193 ವಿಡಿಯೋಗಳನ್ನು 640 ದಿನಗಳಲ್ಲಿ ಈ ಸಾಧನೆ ಸಾಧ್ಯವಾಗಿಸಿದ್ದಾರೆ. ಯೂ ಟ್ಯೂಬ್‌ನಿಂದ ಸಿಲ್ವರ್ ಪ್ಲೇ ಬಟನ್‌ಗಾಗಿ ಸಂಸ್ಥೆ ನಿರೀಕ್ಷೆ ಮಾಡುತ್ತಿದೆ. 65 ಸಾವಿರ ನಿರಂತರ ವೀಕ್ಷಕರನ್ನು ಹೊಂದಿದ ಹೆಮ್ಮೆಯ ಸಿದ್ಧಗಂಗಾ ಸ್ಕೂಲ್ ಚಾನಲ್‌ನ ವೀಕ್ಷಕರ ಸಂಖ್ಯೆ ಕೋಟಿ ದಾಟಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಹೇಮಂತ್ ಮತ್ತು ನಿರ್ದೇಶಕ ಡಾ|| ಜಯಂತ್ ಸಂಭ್ರಮ ಹಂಚಿಕೊಂಡಿದ್ದಾರೆ.

## ಪ್ರೊ. ಚಂಪಾ ನಿಧನಕ್ಕೆ ದಾವಿವಿ ಸಂತಾಪ

ದಾವಣಗೆರೆ, ಜ.13- ನೇರ ನಡೆ, ನುಡಿಯ ಚಿಂತಕ ಪ್ರೊ. ಚಂದ್ರಶೇಖರ ಪಾಟೀಲ ಅವರ ನಿಧನದಿಂದ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರ ಕಳೆಗುಂದಿದಂತಾಗಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಸಂತಾಪ ವ್ಯಕ್ತಪಡಿಸಿದ್ದಾರೆ.

# ಬಸವ ತತ್ವವೇ ಉಸಿರಾದ ಸಿದ್ಧರಾಮಣ್ಣರಿಗೆ 101ರ ಸಂಭ್ರಮ

900 ವರ್ಷಗಳ ಹಿಂದೆ ನಡೆದ ಬಸವಾದಿ ಶಿವಶರಣರ ಕ್ರಾಂತಿಯ ಪರಿಣಾಮ 21ನೇ ಶತಮಾನದಲ್ಲಿಯೂ ಅಚ್ಚ ಹಸಿರಾಗಿ ಉಳಿದಿರುವುದು ವಿಶೇಷ. ಬಸವತತ್ವವನ್ನೇ ಹಾಸಿ, ಬಸವ ತತ್ವವನ್ನೇ ಹೊದ್ದು, ಬಸವ ತತ್ವವನ್ನೇ ಉಸಿರಾಗಿಸಿಕೊಂಡು, ಬಸವ ತತ್ವವನ್ನು ಮಂತ್ರವಾಗಿಸಿಕೊಂಡು ನಡೆದಾಡುವ ವಚನ ಭಂಡಾರವಾಗಿ ಕಂಗೊಳಿಸುತ್ತಿರುವವರು ಪೂಜ್ಯರಾದ ವಿ.ಸಿದ್ದರಾಮಣ್ಣ ಶರಣರು.

ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಮತ್ತಿಹಳ್ಳಿ ಗ್ರಾಮದಲ್ಲಿ 1922 ಜನವರಿ 14 ರಂದು ಶಿವಯೋಗಿ ಸಿದ್ಧರಾಮೇಶ್ವರರ ಜಯಂತಿಯಂದು ಜನಿಸಿದ ಶಿವರಾಮಣ್ಣನವರು, ತಂದೆಯವರಿಂದ ಸಂಗೀತ, ನಾಟಕ ಕಲೆಯನ್ನು ಕಲಿತು ತಮ್ಮ ಪ್ರತಿಭೆಯಿಂದ ನಟರಾಗಿ, ನಾಟಕ ನಿರ್ದೇಶಕರಾಗಿ, ರಚನೆಕಾರರಾಗಿ, ಸಂಗೀತಗಾರರಾಗಿ ಬೆಳೆದು ಬಂದವರು.

ಪ್ರವಚನ ಪಿತಾಮಹರೆಂದೇ ಹೆಸರಾದ ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ಪ್ರವಚನ ಧಾರೆಗೆ ಆಕರ್ಷಿತರಾಗಿ, ಅವರಿಂದ ಇಷ್ಟಲಿಂಗ ದೀಕ್ಷೆ ಪಡೆದು ಬಸವ ತತ್ವ ಪ್ರಸಾರಕ್ಕೆ ಅಣಿಯಾಗಿ ವಿಶ್ವ ಕಲ್ಯಾಣದ ಸಿದ್ಧರಾಮಣ್ಣ ಶರಣ ಎಂಬ ನೂತನ ಅಭಿದಾನವನ್ನು ಪಡೆದರು. ಕೇವಲ ಐದನೇ ತರಗತಿ ಕಲಿತಿರುವ ಸಿದ್ಧರಾಮಣ್ಣನವರು ಬಸವ ಗ್ರಂಥ ಭಂಡಾರವೇ ಆಗಿದ್ದಾರೆ. ಸಾವಿರಾರು ವಚನಗಳು ಇವರಿಗೆ ಕಂಠಪಾಠವಾಗಿವೆ.

**ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ,**
**ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ**
**ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,**
**ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ**
**ಸೌರಾಷ್ಟ್ರ ಸೋಮೇಶ್ವರ ಲಿಂಗವು ಬೇರಿಲ್ಲ ಕಾಣಿರೋ**

ಎಂಬ ಶರಣ ಆದಯ್ಯನವರ ವಚನದಂತೆ ಪರಿಶುದ್ಧ ಜೀವನವನ್ನು ನಡೆಸುತ್ತಿದ್ದಾರೆ. ಶುಭ್ರ ಶ್ವೇತಧಾರಿಯಾದ ಇವರ ಮುಖದಲ್ಲಿ ಬಸವ ಕಳೆಯಿದೆ. ಬಾಗಿದ ತಲೆ, ಮುಗಿದ ಕೈಯ ಗುಣ ಪೂಜ್ಯರದ್ದು, 100ರ ತುಂಬು ಜೀವನದಲ್ಲಿ ಯುವಕರೇ ನಾಚುವಂತೆ ಕಂಚಿನ ಕಂಠದಲ್ಲಿ ವಚನ ಗಾಯನ ಮತ್ತು ವಚನ ವಿಶ್ಲೇಷಣೆಯನ್ನು ಪುಂಖಾನುಪುಂಖವಾಗಿ ಹೇಳುವ ಶೈಲಿ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ಅಪರೂಪದಲ್ಲಿ ಅಪರೂಪದ ವ್ಯಕ್ತಿತ್ವ ಹೊಂದಿರುವ ಇವರು ದೈನಂದಿನ ಕಾರ್ಯಕ್ರಮಗಳನ್ನು ಚಾಚೂ ತಪ್ಪದೇ ನಡೆಸಿಕೊಂಡು ಬಂದಿದ್ದಾರೆ. ಸಮಯಕ್ಕೆ ಸರಿಯಾಗಿ ವಚನ ಪ್ರಾರ್ಥನೆ, ಶಿವಾನುಭವ ಚಿಂತನೆ, ಬಂದ ಭಕ್ತರಿಗೆ ಬಸವ ತತ್ವದ ಪರಿಕಲ್ಪನೆಯನ್ನು ವಿವರಿಸಿ ಮನ ಮುಟ್ಟುವಂತೆ ಹೇಳಿ, ಅವರ ಹೃದಯವನ್ನು ಪರಿವರ್ತಿಸುವ ಹರಿಕಾರರಿವರು. ಇವರು ಕೈ ಎತ್ತಿದರೆ ಕಾಯಕ, ಕಾಲಿಟ್ಟರೆ ಪಾವಿತ್ರ್ಯ, ಸರಳ ಸಜ್ಜನಿಕೆಯ ಜೀವನ ಕ್ರಮವನ್ನು ಒಳಗೊಂಡು ಶಿವಶರಣರ ಜೀವನವನ್ನು ಆದರ್ಶವಾಗಿರಿಸಿಕೊಂಡು ನಿಂತ ನೀರಾಗಿ ನಿಲ್ಲದೆ ಚರಜಂಗಮರಾಗಿ ಸತ್ಯ ಶರಣರ ಪಥದಲ್ಲಿ ನಡೆನುಡಿಗಳನ್ನು ಒಗ್ಗೂಡಿಸಿಕೊಂಡು ಕರ್ನಾಟಕದಲ್ಲಷ್ಟೇ ಅಲ್ಲದೆ ಮಹಾರಾಷ್ಟ್ರ, ಆಂಧ್ರಪ್ರದೇಶ, ದೆಹಲಿ ಇಲ್ಲೆಲ್ಲ ಬಸವ ತತ್ವದ ಜ್ಞಾನಜ್ಯೋತಿಯ ಪ್ರಕಾಶದ ಬೆಳಗನ್ನು ಬಿಂಬಿಸಿದ್ದಾರೆ.

**ಶರಣರ ಸಾಹಿತ್ಯ ಸೇವೆ :** ಶರಣರು ಸುಮಾರು 20ಕ್ಕೂ ಹೆಚ್ಚು ನಾಟಕಗಳು, 11 ತಾತ್ವಿಕ ಗ್ರಂಥಗಳು, 2 ಕಾವ್ಯಗಳು, ಹಲವಾರು ಕವನಗಳು ಹಾಗೂ ಆಧುನಿಕ ವಚನಗಳನ್ನು ಕನ್ನಡ ಸಾಹಿತ್ಯದ ಮಡಿಲಿಗೆ ನೀಡಿದ್ದಾರೆ.

**'ಅನುಭಾವ ದಾಸೋಹಕ್ಕಾಗಿ**
**ಅನ್ನದಾಸೋಹ ನಡೆಯಲಿ**
**ಅನ್ನ ದಾಸೋಹ ಹೊಟ್ಟೆಗಾದರೆ**
**ಅನುಭಾವ ದಾಸೋಹ ಆತ್ಮಕ್ಕೆ**
**ಕೇವಲ ಅನ್ನಕ್ಕಾಗಿ ಹಾತೊರೆಯುವುದು ಭವಿಯ ಲಕ್ಷಣ.**
**ಆತ್ಮದ ಹಸಿವಿಗಾಗಿ ಹಾತೊರೆಯುವುದು ಭಕ್ತನ ಲಕ್ಷಣ ನೋಡಾ**
**ಲೋಕಗುರು ಬಸವ ಪ್ರಭುವೆ.'**

ಇಂತಹ ಸಾಕಷ್ಟು ಆಧುನಿಕ ವಚನಗಳನ್ನು ರಚಿಸಿದ್ದಾರೆ.



**ಪೂಜ್ಯರಿಗೆ ಸಂದ ಪ್ರಶಸ್ತಿಗಳು :** ಶರಣ ಕಕ್ಕಯ್ಯ ಪ್ರಶಸ್ತಿ, ಬಸವಗುರು ಕಾರುಣ್ಯ ಪ್ರಶಸ್ತಿ, ಚೆನ್ನಬಸವ ಪ್ರಶಸ್ತಿ, ಬಸವ ತತ್ವ ಶ್ರೀ ಪ್ರಶಸ್ತಿ, ಬಸವಾನುಭಾವಿ ಗೌರವ ಪ್ರಶಸ್ತಿ, ಅನುಭವ ಮಂಟಪ ಪ್ರಶಸ್ತಿ, ಗಣಾಚಾರ ಪ್ರಶಸ್ತಿಗಳು ಪೂಜ್ಯರಿಗೆ ದೊರಕಿವೆ.ಅಲ್ಲದೆ ಇವರ ಜೀವನ ಸಾಧನೆ ಕುರಿತು ಸುಮಾರು 9 ಪುಸಕ್ತಗಳು, 70ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿರುವುದು ಇವರ ವ್ಯಕ್ತಿತ್ವಕ್ಕಿಡಿದ ಕೈಗನ್ನಡಿ.

ಶರಣರದ್ದು ವೈಚಾರಿಕ ನಿಲುವು, ಪ್ರಸಾದಿಕ ಗುಣ. ಅಷ್ಟಾವರಣ, ಪಂಚಾಚಾರಗಳ ತತ್ವ ನಿಷ್ಠರಾದ ಇವರು ಭಕ್ತರಿಗೆ ಶರಣ ಧರ್ಮದ ನಡವಳಿಕೆಗಳನ್ನು ಆಚಾರ ಸಹಿತ ತಿಳಿಸುತ್ತಾರೆ. 12ನೇ ಶತಮಾನದ ಬಸವೇಶ್ವರರ ತಾತ್ವಿಕ ಬದ್ಧತೆ 21ನೇ ಶತಮಾನದ ಪೂಜ್ಯ ವಿ. ಸಿದ್ಧರಾಮಣ್ಣನವರ ಮುಖದಲ್ಲಿ ಕಂಗೊಳಿಸುತ್ತಿದೆ. ಅವರ ಮುಗ್ಧ ಮಗುವಿನ ಮಾತು ಮಾತ್ರ ಹೃದಯದ ಮಮತೆ ಶತ್ರುಗಳನ್ನು ಮಿತ್ರರನ್ನಾಗಿಸುವ ಶಕ್ತಿಯುಳ್ಳದ್ದು.

ಹಣ್ಣು ಮಾಗಿ ಪಕ್ವವಾಗುವಂತೆ ಪೂಜ್ಯ ಶರಣರು ಜ್ಞಾನದಲ್ಲಿ ಮಾಗಿ ಸಮಾಜಕ್ಕೆ ವಚನದ ಸಿಹಿಯನ್ನು ಹಂಚುವ ಜ್ಞಾನವೃದ್ಧರಾಗಿ, ವಯೋವೃದ್ಧರಾಗಿ ಸಂತೃಪ್ತಿ, ಸತ್ಯನಿಷ್ಠೆ, ಸಮಾನತೆ, ಸಮಚಿತ್ತತೆ ಕಾಯಕ-ದಾಸೋಹ ಮುಂತಾದವುಗಳನ್ನು ರೂಢಿಸಿಕೊಂಡಿರುವ ಪೂಜ್ಯರ ಬದುಕು ಇಂದಿನ ಯುವ ಸಮೂಹಕ್ಕೆ ದಾರಿ ದೀಪವಾಗಲಿ.

**- ಡಾ. ಗೀತಾ ಬಸವರಾಜು,** ಉಪನ್ಯಾಸಕರು,
ಎ.ವಿ.ಕೆ ಮಹಿಳಾ ಕಾಲೇಜು, ದಾವಣಗೆರೆ.

## ಅನುಭವ ಮಂಟಪವೇ ಪ್ರಥಮ 'ಕನ್ನಡ ವಿಶ್ವವಿದ್ಯಾಲಯ'

ಮೊಟ್ಟ ಮೊದಲು ಕನ್ನಡವನ್ನು ಲೋಕಾರ್ಪಣೆ ಮಾಡಿದ ವಿಶ್ವವಿದ್ಯಾಲಯವೆಂದರೆ ಬಸವ ಕಲ್ಯಾಣದ ಅನುಭವ ಮಂಟಪ.

ಭಾರತದ ಮೂಲೆ ಮೂಲೆಗಳಿಂದ ನಾನಾ ಪ್ರದೇಶಗಳಾದ ಕಾಶ್ಮೀರ, ಒರಿಸ್ಸಾ, ಅಫಘಾನಿಸ್ತಾನ, ಮಹಾರಾಷ್ಟ್ರ, ಆಂಧ್ರದಿಂದ ಬಂದ ಎಲ್ಲಾ ಶರಣರು ಕನ್ನಡವನ್ನು ಕಲಿತರು. ಆಯಾ ಪ್ರದೇಶದವರು ಅವರವರ ಭಾಷೆಯಲ್ಲಿಯೇ ವಚನಗಳನ್ನು ಬರೆಯಬಹುದಿತ್ತು. ಆದರೆ, ಕನ್ನಡವನ್ನು ಕಲಿತು, ಕನ್ನಡದಲ್ಲಿಯೇ ಏಕೆ ಬರೆದರೆಂದರೆ ಅದು ದೇವ ಭಾಷೆ, ಸಂಸ್ಕೃತ ದೇವ ಭಾಷೆ ಅಲ್ಲ.

ಮಹಾತ್ಮಾ ಬಸವೇಶ್ವರರು, ಸಂಸ್ಕೃತದ ಮನೆತನದಲ್ಲಿಯೇ ಹುಟ್ಟಿ ಬಂದವರು. ಅವರ ತಂದೆ ಮಾದರಸರು ಸಂಸ್ಕೃತದ ಮಹಾ ವಿದ್ವಾಂಸರು ಮತ್ತು ಅಗ್ರಹಾರದ ಒಡೆಯರು, ಇಂತವರ ಮಗ ಬಸವಣ್ಣನವರು. ಸಂಸ್ಕೃತದಲ್ಲಿಯೇ ವಚನಗಳನ್ನು ಬರೆಯಬಹುದಿತ್ತು. ಆದರೆ ಹಾಗೆ ಮಾಡಲಿಲ್ಲವೇಕೆ? ಅವರ ಪವಿತ್ರ ಹೃದಯ ಹೇಳಿತು, ಕನ್ನಡ ದೇವ ಭಾಷೆ ಮರೆಯದಿರು. ಆ ಹೃದಯ ವಾಣಿಯನ್ನು ಹಗಲಿರುಳು ಚಿಂತಿಸಿದರು.

ಕನ್ನಡ ದೇವ ಭಾಷೆ ಏಕೆಂದರೆ, ತಾಯಿಯ ಗರ್ಭದಿಂದ ಕೂಸು ಬಂದಾಕ್ಷಣ ತಾಯಿಗೂ, ಮಗುವಿಗೂ ಸಂಬಂಧವಿರುವ ಕರುಳ ಹುರಿಯನ್ನು ಕತ್ತರಿಸಿ ತಾಯಿಯಿಂದ ಬೇರೆ ಮಾಡಿದಾಕ್ಷಣವೇ ಆ ಕೂಸು ಅಳುವುದು ಅವ್ವಾ, ಅವ್ವಾ, ಅಮ್ಮಾ ಎಂದು ಅಚ್ಚ ಕನ್ನಡದಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದೆ. ಆ ಮಗುವಿಗೆ ಕನ್ನಡವನ್ನು ಕಲಿಸಿದವರು ಯಾರು? ಬ್ರಹ್ಮಾಂಡವನ್ನೇ ಸೃಷ್ಟಿಸಿದ ಸರ್ವ ಕರ್ತೃ ಪರಮಾತ್ಮನಲ್ಲವೇ? ಆ ಕೂಸು ಅಮೆರಿಕ, ರಷ್ಯ, ಜಪಾನ್, ಇಂಗ್ಲೆಂಡ್, ಪಾಕಿಸ್ತಾನ ಎಲ್ಲಿಯೇ ಹುಟ್ಟಲಿ ಆ ಕೂಸು ತಾಯಿಯ ಗರ್ಭದಿಂದ ಹೊರ ಬಂದಾಕ್ಷಣ ಅವ್ವಾ, ಅವ್ವಾ ಎಂದು ಅಳುವುದು ಕನ್ನಡದಲ್ಲಿಯೇ ತಾನೆ? ಆದ್ದರಿಂದ ಕನ್ನಡ ದೇವ ಭಾಷೆ. ಇದು ವಿಶ್ವದ ತಾಯಿಯ ಭಾಷೆ.

ಅನುಭವ ಮಂಟಪವೆಂಬ ಕನ್ನಡ ವಿಶ್ವವಿದ್ಯಾಲಯದಲ್ಲಿ ವಯಸ್ಕರ ಶಿಕ್ಷಣ ಶಾಲೆ ಪ್ರಾರಂಭವಾಯಿತು. ಈ ವಿಶ್ವವಿದ್ಯಾಲಯದಲ್ಲಿ ಕುರಿ ಕಾಯುವ, ದನ ಕಾಯುವ, ಬಟ್ಟೆ ನೇಯುವ, ಜೋಡು ಚಪ್ಪಲಿ ಮಾಡುವ, ಕ್ಷೌರ ಮಾಡುವ, ಕ್ಷೌರಿಕ, ಕುಂಬಾರ ಹೀಗೆ ಎಲ್ಲಾ ಕಾಯಕದವರೂ ಇದ್ದರು. ಮೊದಲು ಇವರೆಲ್ಲಾ ಅವರವರ ಕಲೆಗಳನ್ನು ಕುಲಗಳೆಂದು ತಿಳಿದಿದ್ದರು. ಅನುಭವ ಮಂಟಪ ವಿಶ್ವವಿದ್ಯಾಲಯದಲ್ಲಿ ಬಸವೇಶ್ವರರು, ಅವು ಕಲೆಗಳು, ಕುಲಗಳಲ್ಲ ಎಂದು ತಿಳಿಸಿ ಹೇಳಿದ ಮೊದಲನೇ ಕನ್ನಡದ ವಿಶ್ವವಿದ್ಯಾಲಯದ ಕನ್ನಡ ಕುಲ ಗುರುವೆಂದರೆ ಜಗಜ್ಯೋತಿ ಬಸವೇಶ್ವರರು.

ಭಾರತದಲ್ಲಿರುವ ಎಲ್ಲಾ ಧರ್ಮಗಳು ಗುರು-ಶಿಷ್ಯ ಎಂಬ ಭೇದದಿಂದ ಕೂಡಿವೆ. ಆದರೆ, ಬಸವೇಶ್ವರರು ಸ್ಥಾಪಿಸಿದ ಕನ್ನಡ ವಿಶ್ವವಿದ್ಯಾಲಯ ಅನುಭವ ಮಂಟಪದಲ್ಲಿ ಗುರು-ಶಿಷ್ಯ ಭೇದವಿಲ್ಲ. ಗುರು ಮುಟ್ಟಿ ಗುರುವಾಗುವ, ಜ್ಯೋತಿ ಮುಟ್ಟಿ ಜ್ಯೋತಿಯಾಗುವ ಧರ್ಮ ಅಂಗದ ಮೇಲೆ ಅಂಗ ಉಳ್ಳವರೆಲ್ಲಾ ಸಂಗನಾಥನೆಂಬ ಎಂಬ ಧರ್ಮ.

ಜಗತ್ತಿನ ಯಾವ ವಿಶ್ವವಿದ್ಯಾಲಯವೂ ಸಾಧಿಸದ ಮಹತ್ತರ ಸಾಧನೆಯನ್ನು ಈ ಅನುಭವ ವಿಶ್ವವಿದ್ಯಾಲಯವು ಸಾಧಿಸಿ ತೋರಿಸಿದೆ. ಅನುಭವ ಮಂಟಪ ವಿಶ್ವವಿದ್ಯಾಲಯದ ಏಳನೂರ ಎಪ್ಪತ್ತು ಶರಣರೆಲ್ಲಾ ಅಚ್ಚ ಕನ್ನಡದಲ್ಲಿ ಬರೆದ ವಚನಗಳು, ಇಂದಿನ ನಮಗೆಲ್ಲಾ ಗುರುವಾಗಿ ಬೋಧನೆಯನ್ನು ಕೊಡುತ್ತವೆ. ಇದು ಕನ್ನಡಾಂಬೆಯ ವಚನ ಶಕ್ತಿ.

**-ವಿ. ಸಿದ್ದರಾಮಣ್ಣ,** ಬಸವ ಮಹಾಮನೆ,
ಬಸವ ಬಳಗ, ಸರಸ್ವತಿ ನಗರ, ದಾವಣಗೆರೆ.

## ಬಸವ ಬಳಗದಿಂದ ಇಂದು ಗೌರವ ಸಮರ್ಪಣೆ

**ಶ್ವೇತ ವಸ್ತ್ರಧಾರಿ, ಮುಖದಲ್ಲಿ ಬಸವ ಕಳೆ, ಹಣೆಯ ಮೇಲೆ ಕಂಗೊಳಿಸುವ ವಿಭೂತಿ, ನೋಡಿದಾಕ್ಷಣ ನಮಸ್ಕರಿಸಬೇಕೆಂಬ ಭಾವ ಮೂಡುವ ಮೇಧಾವಿ ಸಿದ್ಧರಾಮಣ್ಣ ಶರಣರು ಜನವರಿ 2022ರ 14ನೇ ತಾರೀಖಿಗೆ ಅಂದರೆ ಇಂದಿಗೆ ನೂರು ವರ್ಷ ಪೂರೈಸಿ 101ನೇ ವರ್ಷಕ್ಕೆ ಪಾದಾರ್ಪಣೆ ಮಾಡಲಿದ್ದಾರೆ. ಬಸವ ಬಳಗದ ಮೂಲಕ ಬಸವ ತತ್ವಗಳನ್ನು ಪಸರಿಸುತ್ತಾ, ಆಧುನಿಕತೆಗೂ ಹೊಂದಿಕೊಂಡು ರಾಜ್ಯದ ಮೂಲೆ ಮೂಲೆಯಿಂದ ನಿತ್ಯವೂ ಕರೆ ಮಾಡುವ ಹಲವಾರು ಶರಣ-ಶರಣೆಯರಿಗೆ ವಚನಗಳನ್ನು ಸರಳವಾಗಿ ಅರ್ಥೈಸುವ ಸಿದ್ಧರಾಮಣ್ಣ ಶರಣರ ಜನ್ಮ ದಿನ ಬಸವ ಬಳಗದ ಸದಸ್ಯರಿಗೆ, ರಾಜ್ಯಾದ್ಯಂತ ಇರುವ ಬಸವ ತತ್ವ ಅನುಯಾಯಿಗಳಿಗೆ ಸಂತಸ ತಂದಿದೆ.**

**ತಮ್ಮ ನೂರು ವರ್ಷದ ಗುಟ್ಟೇನು ಎಂಬ ಪ್ರಶ್ನೆಗೆ 'ಆಯುಷ್ಯ ತೀರಿದಲ್ಲದೆ ಮರಣವಿಲ್ಲ, ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ. ಅಂಜಲ ದೇಕೋ ಲೋಕ ವಿಗರ್ಭಣೆಗೆ ಅಂಜಲದೇಕೋ, ಕೂಡಲಸಂಗಮದೇವಾ ನಿಮ್ಮಾಳಾಗಿ' ಎಂಬ ಬಸವಣ್ಣನವರ ವಚನವನ್ನೇ ಉದಾಹರಿಸುತ್ತಾ ಮುಗುಳ್ನಗುವ ಶರಣರಿಗೆ ದಾವಣಗೆರೆ ಸರಸ್ವತಿ ನಗರದ ಬಸವ ಬಳಗದ ವತಿಯಿಂದ ಇಂದು ಶುಕ್ರವಾರ ಬೆಳಿಗ್ಗೆ 7.30ರ ಸಾಮೂಹಿಕ ಲಿಂಗಪೂಜೆ ನಂತರ ಗೌರವ ಸಮರ್ಪಣೆ ಸಲ್ಲಿಸಲಾಗುತ್ತದೆ. ಕೋವಿಡ್ ಮಾರ್ಗಸೂಚಿ ಹಿನ್ನೆಲೆಯಲ್ಲಿ ಕಾರ್ಯಕ್ರಮ ಸರಳವಾಗಿರಲಿದೆ. ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ನಡೆಸುವ ಅಭಿಲಾಷೆ ಬಸವ ಬಳಗಕ್ಕಿದೆ.**

## ಹೊನ್ನಾಳಿ : ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಘೋಷಿಸಲು ಕಿಸಾನ್ ಸಂಘದ ಆಗ್ರಹ



ಹೊನ್ನಾಳಿ, ಜ.13- ಕೇಂದ್ರ ಸರ್ಕಾರ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಘೋಷಿಸಬೇಕು ಎಂದು ಭಾರತೀಯ ಕಿಸಾನ್ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಕ್ಯಾಸಿನಕೆರೆ ಕೆ.ಸಿ. ತಿಪ್ಪೇಶ್ ಒತ್ತಾಯಿಸಿದರು.

ಈ ಕುರಿತು ಹೊನ್ನಾಳಿ ತಾಲೂಕು ಕಚೇರಿಯಲ್ಲಿ ಮನವಿ ಸಲ್ಲಿಸಿ ಅವರು ಮಾತನಾಡಿ, ಕೃಷಿ ಉತ್ಪನ್ನಗಳಿಗೆ ಖರೀದಿ ಗ್ಯಾರಂಟಿ ನೀಡಬೇಕು. ಘೋಷಿತ ಬೆಲೆಗಿಂತ ಕಡಿಮೆ ಬೆಲೆಗೆ ಯಾವುದೇ ಕಾರಣಕ್ಕೂ ಖರೀದಿ ಆಗಬಾರದು ಎಂದು ಆಗ್ರಹಿಸಿದರು.

ಭಾರತೀಯ ಕಿಸಾನ್ ಸಂಘದ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಕೂಲಂಬಿ ಬಿ.ಬಿ. ಮುರುಗೇಶ್, ಜಿಲ್ಲಾ ಕೋಶಾಧ್ಯಕ್ಷ ಎಂ.ಕೆ. ಶಾಂತರಾಜ್, ಮುಖಂಡರಾದ ಕ್ಯಾಸಿನಕೆರೆ ಹಾಲಸ್ವಾಮಿ, ಕಮ್ಮಾರಗಟ್ಟೆ ಹರೀಶ್ ಇತರರು ಇದ್ದರು.

## ಬಿಐಇಟಿ ಕಾಲೇಜಿಗೆ 'ಅಟಲ್ ರ್‍ಯಾಂಕ್' ಮನ್ನಣೆ

ದಾವಣಗೆರೆ, ಜ. 13- ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯಕ್ಕೆ 'ಅಟಲ್ ರ್‍ಯಾಂಕ್' ಅಡಿಯಲ್ಲಿ ಮನ್ನಣೆ ದೊರೆತಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ತಿಳಿಸಿದ್ದಾರೆ.

ದೇಶದ ಖಾಸಗಿ ಶಿಕ್ಷಣ ಸಂಸ್ಥೆಗಳ ಅಡಿಯಲ್ಲಿ 2020-21 ನೇ ಸಾಲಿನಲ್ಲಿ ಬ್ಯಾಂಡ್-ಪರ್‌ಫಾರ್ಮರ್ ಮಾನ್ಯತಾ ಪ್ರಮಾಣ ಪತ್ರವನ್ನು ಭಾರತ ಸರ್ಕಾರದ ಉನ್ನತ ಶಿಕ್ಷಣ ಸಚಿವಾಲಯವು 'ಅಟಲ್ ರ್‍ಯಾಂಕ್' ಅಡಿಯಲ್ಲಿ ನೀಡಿದೆ ಎಂದು ಕಾಲೇಜಿನ ಸಾರ್ವಜನಿಕ ಸಂಪರ್ಕ ಡೀನ್ ಡಾ. ಜಿ.ಪಿ. ದೇಸಾಯಿ ವಿವರಿಸಿದ್ದಾರೆ.

ಈ ಮನ್ನಣೆಯು ಬಿಐಇಟಿ ಕಾಲೇಜಿನ ಸಾಧನೆಗೆ ಹೆಮ್ಮೆಯ ಗರಿಯನ್ನು ಮೂಡಿಸಿದೆ. ಕಾಲೇಜಿನ ಸಾಧನೆಗೆ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಶಾಮನೂರು ಮಲ್ಲಿಕಾರ್ಜುನ್ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಧನುರ್ಮಾಸ ತಿರುಕಲ್ಯಾಣ ಮಹೋತ್ಸವಂ

ವಿಕಾಸ ತರಂಗಿಣಿ ಮತ್ತು ಆಂಡಾಳ್ ಗೋಷ್ಠಿ (ದಾವಣಗೆರೆ) ಇವರಿಂದ ಇಂದು ಸಂಜೆ 4.30 ಕ್ಕೆ ಎಂಸಿಸಿ ಎ ಬ್ಲಾಕ್‌ನಲ್ಲಿರುವ ತೊಗಟವೀರ ಕಲ್ಯಾಣ ಮಂಟಪದಲ್ಲಿ ಧನುರ್ಮಾಸ ತಿರುಕಲ್ಯಾಣ ಮಹೋತ್ಸವ ನಡೆಯುವುದು. ಶ್ರೀ ಗೋದಾ ರಂಗನಾಥಸ್ವಾಮಿ ಮೆರವಣಿಗೆ, ಅನಂತರ ತಿರುಕಲ್ಯಾಣೋತ್ಸವ ನಡೆಯಲಿದೆ ಎಂದು ವಿಕಾಸ ತರಂಗಿಣಿ ಸಂಚಾಲಕ ಬಿ. ಸತ್ಯನಾರಾಯಣ ರೆಡ್ಡಿ ತಿಳಿಸಿದ್ದಾರೆ.

## ಭಜನಾ ಸ್ಪರ್ಧೆ ದಿನಾಂಕ ವಿಸ್ತರಣೆ

ದಾವಣಗೆರೆ, ಜ.13- ಶ್ರೀ ವೀರೇಶ್ವರ ಪುಣ್ಯಾಶ್ರಮದ ಆಶ್ರಯದಲ್ಲಿ ಬರುವ ಫೆಬ್ರವರಿ 2 ರಿಂದ ಮಾರ್ಚ್ 3ರವರೆಗೆ ಒಂದು ತಿಂಗಳ ಕಾಲ ಹಮ್ಮಿಕೊಳ್ಳಲಾದ ರಾಜ್ಯ ಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆಗೆ ಇದೇ ದಿನಾಂಕ 15ರ ವರೆಗೆ ಹೆಸರು ನೋಂದಾಯಿಸುವಂತೆ ಸ್ಪರ್ಧೆಯ ಆಯೋಜಕ ಎ.ಕೊಟ್ರಪ್ಪ ಕಿತ್ತೂರು (9480176601) ತಿಳಿಸಿದ್ದಾರೆ.




ಸಂಕ್ರಾಂತಿ ಶುಭಾಶಯಗಳು

ನಮ್ಮೆಲ್ಲಾ ಆತ್ಮೀಯ ಬಂಧು - ಮಿತ್ರರಿಗೂ, ಸರ್ವ ನಾಗರಿಕರಿಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ಡಿ. ಕೆ. ಸಂಗಮೇಶ್ ಎಲಿಗಾರ್
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710



ಸಂಕ್ರಾಂತಿ ಶುಭಾಶಯಗಳು

ನಮ್ಮೆಲ್ಲಾ ಆತ್ಮೀಯ ಸ್ನೇಹಿತರಿಗೂ, ಬಂಧುಗಳಿಗೂ ಹಾಗೂ ನಗರದ ಸರ್ವ ನಾಗರಿಕರಿಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ಪವಾಡಪ್ಪ ತಿಪ್ಪೇಸ್ವಾಮಿ ದಸ್ತಾವೇಜು ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765

ಮಧು ಕ್ಲಿನಿಕ್
ಸಿದ್ದಮ್ಮ ಪಾರ್ಕ್ ಹತ್ತಿರ, 1ನೇ ಮುಖ್ಯ ರಸ್ತೆ, 10ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ.
ಡಾ|| ಎ.ಎಂ. ಮಲ್ಲಿಕಾರ್ಜುನಪ್ಪ
M.B.B.S., M.S.D.L.O.
ಇ.ಎನ್.ಟಿ. ಸರ್ಜನ್ ಅಂಡ್ ಫ್ಯಾಮಿಲಿ ಫಿಜಿಷಿಯನ್,
ಸಮಯ : ಮಧ್ಯಾಹ್ನ 12.30 ರಿಂದ 2.00ರ ವರೆಗೆ
ಸಂಜೆ 6.30 ರಿಂದ ರಾತ್ರಿ 9.00ರ ವರೆಗೆ
ಶ್ರೀ ರೇಣುಕಾ ಮೆಡಿಕಲ್ಸ್ ಅಂಡ್ ಜನರಲ್ ಸ್ಟೋರ್ಸ್
1ನೇ ಮೇನ್, 10ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ.
ಮೊ : 6363393084, 9986161127.
ನಮ್ಮಲ್ಲಿ ರಿಯಾಯಿತಿ ದರದಲ್ಲಿ ಔಷಧಿಗಳು ದೊರೆಯುತ್ತವೆ.
ಡೋರ್ ಡಿಲೆವರಿ ಸೌಲಭ್ಯವಿದೆ.

ಸಾರ್ವಜನಿಕ ಎಚ್ಚರಿಕೆಯ ನೋಟಿಸ್

ನಮ್ಮ ಪಕ್ಷಗಾರರಾದ **ಶ್ರೀಮತಿ ಮಂಜುಳಾ ಕೋಂ ಬಾಲರಾಜ್ ದಂಡಿನ** ಈ ಮೂಲಕ ಸಾರ್ವಜನಿಕ ಎಚ್ಚರಿಕೆಯ ನೋಟಿಸ್ ಕೊಡುವುದೇನೆಂದರೆ ದಾವಣಗೆರೆ ತಾಲ್ಲೂಕು ಜಿಲ್ಲಾ ಹೋಬಳಿಯಲ್ಲಿರುವ ಸ್ವತ್ತು ವ ಆಸ್ತಿ ನಂಬರ್ **638 (Old) ಮತ್ತು 782/1-782/2 (New)** ವಿಜಯಲಕ್ಷ್ಮಿ ರೋಡ್ (ತಂಬಾಕು ಪೇಟೆ) ದಾವಣಗೆರೆ. ಸದರ ಸ್ವತ್ತುವ ಆಸ್ತಿಯ ಕೇಸಿನ ವಿಚಾರಣೆಯು ಮಾನ್ಯ ಉಚ್ಚ ನ್ಯಾಯಾಲಯ **(ಹೈ ಕೋರ್ಟ್-RSA FR No 1243/2021)** ದಲ್ಲಿ ತೀವ್ರ ವಿಚಾರಣೆಯ ಹಂತದಲ್ಲಿರುತ್ತದೆ. ಈ ಮೂಲಕ ಸದರ ಸ್ವತ್ತುವ ಆಸ್ತಿ ಖರೀದಿ/ವಿಲೇವಾರಿಗೆ ಸಾರ್ವಜನಿಕರು ಮುಂದಾಗಬಾರದು ಅಂತ ಕೊಟ್ಟ ಸಾರ್ವಜನಿಕ ಎಚ್ಚರಿಕೆ ನೋಟಿಸ್.

J.S. Kyatannavar, Advocate
KAR/Reg No. 935/1994

ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಹೊನ್ನಾಳಿ
ತಾಲ್ಲೂಕು: ಹೊನ್ನಾಳಿ ಜಿಲ್ಲಾ ಪಂಚಾಯತ್ : ದಾವಣಗೆರೆ

ನಂ:ತಾ.ಪಂ.ಹೊ/ಉಖಾಯೋ/ಸ.ನಿ.(ಗ್ರಾ.ಉ)ಮಾ.ಬಾ/ಸಿ.ಆರ್/2021-22 ದಿನಾಂಕ:13.01.2022

:: ಅಲ್ಪಾವಧಿ ದರಪಟ್ಟಿ ಪ್ರಕಟಣೆ ::

ವಿಷಯ: **ಸಹಾಯಕ ನಿರ್ದೇಶಕರು (ಗ್ರಾ,ಉ) ತಾಲ್ಲೂಕು ಪಂಚಾಯತಿ ಹೊನ್ನಾಳಿ ಇವರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ದರಪಟ್ಟಿಗಳನ್ನು ಆಹ್ವಾನಿಸುವ ಕುರಿತು.**

**ಉಲ್ಲೇಖ:1.ಸರ್ಕಾರದ ಪತ್ರ ಸಂ:ಖಆಅ/ಇಉS/141/2021(ಇ-530205), ದಿ:01.09.2021**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ನಿರ್ದೇಶಕರು (ಗ್ರಾ,ಉ) ತಾಲ್ಲೂಕು ಪಂಚಾಯಿತಿ ಹೊನ್ನಾಳಿ ಇವರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿಗಳ ವೀಕ್ಷಣೆ ಮಾಡಲು ವಾಹನದ ಅವಶ್ಯಕತೆ ಇರುತ್ತದೆ.ಆದ್ದರಿಂದ ಪ್ರತಿ ಮಾಹೆಗೆ ಗರಿಷ್ಠ 30,000/-ರೂ,ಗಳ ಮಿತಿಯಲ್ಲಿ ಮಾಸಿಕ ಬಾಡಿಗೆ ಆಧಾರದ ವಾಹನವನ್ನು ಚಾಲಕರೊಂದಿಗೆ ಒದಗಿಸಲು ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು ಆಸಕ್ತ ಸಂಸ್ಥೆಗಳು ದರಪಟ್ಟಿಗಳನ್ನು ದಿನಾಂಕ:29.01.2022ರ ಸಂಜೆ 5-00ಗಂಟೆ ಒಳಗಾಗಿ ಕೆಳಕಂಡ ಷರತ್ತಿಗೊಳಪಟ್ಟು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ನಂತರ ಬಂದಂತಹ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು.

| | |
|---|---|
| ಟೆಂಡರ್ ಪ್ರಕಟಣೆ ಹೊರಡಿಸಿದ ದಿನಾಂಕ: | 14.01.2022 |
| ಟೆಂಡರ್ ಫಾರಂ ನೀಡಲು ಪ್ರಾರಂಭಿಸುವ ದಿನಾಂಕ: | 17.01.2022 |
| ಟೆಂಡರ್ ಫಾರಂ ಪಡೆಯಲು ಅಂತಿಮ ದಿನಾಂಕ: | 28.02.2022 |
| ಟೆಂಡರ್ ಫಾರಂ ಭರ್ತಿ ಮಾಡಿ ಸಲ್ಲಿಸುವ ದಿನಾಂಕ ಮತ್ತು ಸಮಯ | 29.01.2022 |
| ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | 31.01.2022 |
| ಟೆಂಡರ್ ಲಕೋಟೆ ಮೇಲೆ ನಮೂದಿಸಬೇಕಾದ ವಿಳಾಸ | ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಹೊನ್ನಾಳಿ |
| ಸಂಪರ್ಕಿಸಬೇಕಾದ ವಿಳಾಸ | ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಹೊನ್ನಾಳಿ |

**ಷರತ್ತುಗಳು :** 1. 2018, 2019, ಮತ್ತು 2020 ಸಾಲಿನ ಮಾದರಿಯ ಸ್ವಿಫ್ಟ್/ಇಟಿಒಎಸ್ ವಾಹನ ಆಗಿರಬೇಕು.
2. ಚಾಲ್ತಿ ವರ್ಷದ ವಿಮೆ ಹೊಂದಿರಬೇಕು.
3. ಚಾಲ್ತಿ ವರ್ಷಕ್ಕೆ ತೆರಿಗೆ ಪಾವತಿಸಿರಬೇಕು/ಟ್ಯಾಕ್ಸ್ ಕಾರ್ಡ್ ಹೊಂದಿರಬೇಕು.
4. ವಾಹನ ಸುಸ್ಥಿತಿಯಲ್ಲಿರಬೇಕು ಮತ್ತು ಸಾರಿಗೆ ಇಲಾಖೆಯಿಂದ ದೃಢೀಕರಣ (ಎಫ್.ಸಿ) ನೀಡಬೇಕು.
5. ವಾಹನವು ಹಳದಿ ಬೋರ್ಡ್ ಅಡಿಯಲ್ಲಿ ರಿಜಿಸ್ಟ್ರೇಷನ್ ಆಗಿರಬೇಕು.
6. ವಾಹನದ ಯಾವುದೇ ತರಹದ ದುರಸ್ಥಿ ನಿರ್ವಹಣೆ ಮತ್ತು ತಗಲುವ ಇಂಧನ ಮಾಲೀಕರದ್ದೇ ಆಗಿರುತ್ತದೆ.
7. ಅನುಭವಿ ವಾಹನ ಚಾಲಕರಿರಬೇಕು ಮತ್ತು ಚಾಲ್ತಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಮತ್ತು ವಾಹನ ಚಾಲಕರಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ.
8. ಕಛೇರಿಯ ನಿಗದಿತ ಅವಧಿಯಲ್ಲಿ ವಾಹನವನ್ನು ತರುವು ದು.
9. ಶೇ 2% ರಷ್ಟು ಆದಾಯ ತೆರಿಗೆಯನ್ನು ಕಡಿತಗೊಳಿಸಲಾಗುವುದು.
10. ಪ್ರತಿ ತಿಂಗಳ ಲಾಗ್ ಬುಕ್ ನಿರ್ವಹಣೆ ಮಾಡುವುದು ಹಾಗೂ ಜಿ.ಎಸ್.ಟಿ ಹೊಂದಿರುವ ಬಿಲ್ಲನ್ನು ಸಲ್ಲಿಸುವುದು.
11. ಅನುದಾನ ಲಭ್ಯತೆ ಆಧಾರದ ಮೇಲೆ ಹಣ ಪಾವತಿಸಲಾಗುವುದು.

ತಮ್ಮ ವಿಶ್ವಾಸಿ
**ಕಾರ್ಯನಿರ್ವಾಹಕ ಅಧಿಕಾರಿಗಳು,** ತಾಲ್ಲೂಕು ಪಂಚಾಯತ್ ಹೊನ್ನಾಳಿ.

# ಹರಪನಹಳ್ಳಿ : ಒಕ್ಕಣೆ ಕಣಗಳಾದ ರಸ್ತೆಗಳು, ನಿಯಂತ್ರಣಕ್ಕೆ ಮುಂದಾಗದ ಅಧಿಕಾರಿಗಳು

**ಕೆ. ಉಚ್ಚಂಗೆಪ್ಪ**

ಹರಪನಹಳ್ಳಿ, ಜ. 13- ತಾಲ್ಲೂಕಿನ ಬಹುತೇಕ ಗ್ರಾಮೀಣ ರಸ್ತೆಗಳು ಮುಖ್ಯ ರಸ್ತೆಗಳು ಈಗ ಒಕ್ಕಣೆ ಕಣಗಳಾಗಿ ಪರಿವರ್ತನೆಯಾಗಿವೆ. ರೈತಾಪಿ ಸಮುದಾಯಕ್ಕೆ ತಾತ್ಕಾಲಿಕವಾಗಿ ಅನುಕೂಲ ಕಲ್ಪಿಸುವ ಈ ರಸ್ತೆ ವಾಹನಗಳ ಸವಾರರ ಪಾಲಿಗೆ ಅಪಾಯದ ಆಮಂತ್ರಣ ನೀಡುತ್ತಿವೆ.

ರೈತಾಪಿ ಸಮುದಾಯಕ್ಕೆ ತಿಳುವಳಿಕೆ ಮೂಡಿಸುವ ಮೂಲಕ ರಸ್ತೆ ಸುರಕ್ಷಿತ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕಾದ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ತಾಲ್ಲೂಕು ಆಡಳಿತದ ಅಧಿಕಾರಿಗಳು ಮಾತ್ರ ದಿವ್ಯ ನಿರ್ಲಕ್ಷ್ಯತೆಯ ಮುಸುಕು ಹಾಕಿಕೊಂಡಿದ್ದಾರೆ.

ತಾಲ್ಲೂಕಿನ ಬಹುತೇಕ ಗ್ರಾಮೀಣ ಭಾಗದ ರಸ್ತೆಗಳು, ರಾಜ್ಯ ಹೆದ್ದಾರಿಗಳ ಮೇಲೆ ಒಕ್ಕಣೆ ಆರಂಭವಾಗಿದೆ. ರೈತರು ತಾವು ಬೆಳೆದ ತೊಗರಿ, ರಾಗಿ, ಜೋಳ, ಹುರುಳಿ ಸೇರಿದಂತೆ ವಿವಿಧ ಬಗೆಯ ಫಸಲನ್ನು ತಂದು ರಸ್ತೆಯ ಮೇಲೆ ಹಾಕಿ ಒಕ್ಕಣೆ ಆರಂಭಿಸಿದ್ದಾರೆ. ಧಾನ್ಯಗಳ ಒಕ್ಕಣೆ ಮುಗಿದ ನಂತರ, ಅವುಗಳಲ್ಲಿನ ಕಸ, ಕಡ್ಡಿ ಹಾಗೂ ದೂಳನ್ನು ಬೇರ್ಪಡಿಸಲು ಗಾಳಿಯಲ್ಲಿ ತೂರುತ್ತಾರೆ. ಈ ಸಂದರ್ಭದಲ್ಲಿ ವಾಹನಗಳ ಸವಾರರು ಸ್ವಲ್ಪ ತಡೆಯಲು ಹೇಳಿದರೂ, ಕೆಲವರು ಸೌಜನ್ಯ ಕಳೆದುಕೊಂಡು ಸವಾರರ ಜೊತೆ ಸಂಘರ್ಷಕ್ಕೆ ಇಳಿಯುತ್ತಾರೆ. ಹಾಗೆಯೇ ಸಂಚರಿಸಿದರಂತು, ತೂರುವ ಧೂಳು ವಾಹನ ಸವಾರರ ಕಣ್ಣಲ್ಲಿ ಬಿದ್ದು, ಅಪಘಾತವಾದ ನಿದರ್ಶನಗಳು ಇವೆ. ಜೊತೆಗೆ, ರಾಗಿ ಹುಲ್ಲು,



ತೊಗರಿ ಕಟ್ಟಿಗೆ ಮೇಲೆ ಬೈಕ್ ಸವಾರರು ಚಲಿಸುವುದು ಕಷ್ಟದ ಕೆಲಸ, ಸ್ವಲ್ಪ ಮೈಮರೆತರೂ ಸಾಕು, ಜಾರಿ ಬೀಳುವುದು ಖಚಿತ. ಸಣ್ಣಪುಟ್ಟ ಅಪಘಾತವಾಗಿ ಗಾಯಗೊಂಡಿರುವ ಹಲವು ಪ್ರಕರಣಗಳನ್ನು ಒಂದೆಡೆ ಇಟ್ಟರೂ, ಒಕ್ಕಣೆ ಕಣದ ಫಸಲಿನಿಂದಾದ ಅಪಘಾತದ ಸಾವಿನ ಪ್ರಕರಣಗಳನ್ನು ನಿರ್ಲಕ್ಷ್ಯಿಸುವಂತಿಲ್ಲ.

ಕೃಷಿ ಇಲಾಖೆ ಹಾಗೂ ಗ್ರಾಮ ಪಂಚಾಯ್ತಿಗಳಲ್ಲಿ ರೈತಾಪಿ ಸಮುದಾಯಕ್ಕೆ ಒಕ್ಕಣೆ ಕಣ ನಿರ್ಮಾಣಕ್ಕೆಂದೇ ಸಹಾಯಧನ ಯೋಜನೆ ಜಾರಿಯಲ್ಲಿದೆ. ಆದರೆ, ಈ ಕುರಿತು, ರೈತಾಪಿ ಸಮುದಾಯಕ್ಕೆ ಮಾಹಿತಿಯನ್ನು ಅಧಿಕಾರಿಗಳು ಒದಗಿಸದಿರುವುದು ದುರ್ದೈವದ ಸಂಗತಿ.

ರಸ್ತೆಯ ಮೇಲೆ ಆಹಾರ ಧಾನ್ಯಗಳನ್ನು ಒಕ್ಕಣೆ ಮಾಡುತ್ತಿರುವುದರಿಂದ ಕೇವಲ ವಾಹನಗಳ ಅಪಘಾತವಷ್ಟೇ ಅಲ್ಲ, ರಸ್ತೆ ನಿರ್ಮಿಸಲು ಹಾಕಲಾದ ಡಾಂಬರೀಕರಣದ ರಾಸಾಯನಿಕ ಅಂಶದ ಜತೆಗೆ, ರಸ್ತೆಯ ಮಣ್ಣು, ಇತರೆ ಅಂಶಗಳು ಆಹಾರ ಧಾನ್ಯಗಳಿಗೂ ಪಸರಿಸಿ, ಅದನ್ನು ಸೇವಿಸುವವರಿಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬ ದೂರಗಾಮಿ ದುಷ್ಪರಿಣಾಮಗಳ ಎಚ್ಚರಿಕೆಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕಿದೆ.

ಈ ಹಿಂದೆ ಹರಪನಹಳ್ಳಿಯ ಸಿವಿಲ್ ಹಿರಿಯ ನ್ಯಾಯಧೀಶರಾದ ಉಂಡಿ ಮಂಜುಳಾ ಶಿವಪ್ಪನವರು ರಸ್ತೆಗಳಲ್ಲಿ ಒಕ್ಕಣೆ ಮಾಡುವವರಿಗೆ ಬುದ್ದಿ ಹೇಳಿ ತಿದ್ದಿಕೊಳ್ಳದ ಕೆಲವರಿಗೆ ಪ್ರಕರಣ ದಾಖಲು ಮಾಡಿದ್ದನ್ನ ಸ್ಮರಿಸಿಕೊಳ್ಳಬಹುದು.

ಹೀಗಾಗಿ, ತಾಲ್ಲೂಕು ಆಡಳಿತ ಗ್ರಾಮೀಣ ಭಾಗದ ರಸ್ತೆಯ ಮೇಲೆ ಆರಂಭವಾಗಿರುವ ಒಕ್ಕಣೆ ಕಣಗಳನ್ನು ತೆರವುಗೊಳಿಸುವ ಮೂಲಕ ಕೃಷಿ ಇಲಾಖೆ ಹಾಗೂ ಎಂಎನ್ಆರ್‌ಇಜಿ ಯೋಜನೆ ಅಡಿ ಜಾರಿಯಲ್ಲಿರುವ ಸಹಾಯಧನ ಯೋಜನೆಯನ್ನು ವ್ಯಾಪಕವಾಗಿ ಪ್ರಚುರಪಡಿಸುವ ಮೂಲಕ, ಅನುಷ್ಠಾನಗೊಳಿಸಿದಾಗ ಮಾತ್ರ ರಸ್ತೆಯ ಒಕ್ಕಣೆ ಸಂಸ್ಕೃತಿಗೆ ನಿಯಂತ್ರಣ ಹಾಕಲು ಸಾಧ್ಯ.

ದೂರಗಾಮಿ ಆರೋಗ್ಯ ದುಷ್ಪರಿಣಾಮಗಳು ಸಂಭವಿಸುವ ಮುನ್ನ ಅಧಿಕಾರಿ ವಲಯ ಎಚ್ಚೆತ್ತುಕೊಳ್ಳಬೇಕಿರುವುದು ಈಗ ಸಕಾಲ.

## ಹಡಗಲಿ; ತುಂಗಭದ್ರ ನದಿಗೆ ಸೇತುವೆ ನಿರ್ಮಾಣ : ರಸ್ತೆ ಮೇಲ್ದರ್ಜೆಗೆ ಆಗ್ರಹ

ಹೂವಿನಹಡಗಲಿ, ಜ. 13- ತುಂಗಭದ್ರಾ ನದಿಗೆ ಅಡ್ಡಲಾಗಿ ಸುಕ್ಷೇತ್ರ ಮೈಲಾರ ಹಾಗೂ ಗುತ್ತಲ ಮಧ್ಯದಲ್ಲೇ ಎಪ್ಪತ್ತು ವರ್ಷದ ಹಿಂದೆ ನಿರ್ಮಾಣ ಆದ ಸೇತುವೆ ಹಾಗೂ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಲು ಮಕರಬ್ಬಿ ಗ್ರಾಮದ ಎ.ಹೆಚ್. ದಾಸರ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಲ್ಲಿ ಮನವಿ ಮಾಡಿ ಆಗ್ರಹಿಸಿದ್ದಾರೆ.

ಅತಿಯಾದ ಭಾರ ಹೊತ್ತು ಸಂಚರಿಸುವ ವಾಹನಗಳ ದಟ್ಟಣೆಗೆ ಈ ಸೇತುವೆ ಅದುರಿದಂತೆ ಭಾಸವಾಗುತ್ತಿದೆ. ವಾಹನಗಳ ದಟ್ಟಣೆ ಹೆಚ್ಚಾಗಿ ಅಪಘಾತಗಳು ಹೆಚ್ಚಾಗುತ್ತಿವೆ. ಕಾರಣ ಈ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಅಭಿವೃದ್ಧಿಪಡಿಸಿದರೆ ಅನುಕೂಲವಾಗುತ್ತದೆ ಎಂದವರು ಮನವಿ ಮಾಡಿದ್ದಾರೆ.

## ಹರಪನಹಳ್ಳಿ : ಜನಪದ ಸಂಗೀತ ಸಂಕ್ರಾಂತಿ, ಔತಣಕೂಟ



ಮಾಜಿ ಶಾಸಕ ಎಂ.ಪಿ.ರವೀಂದ್ರ ಪ್ರತಿಷ್ಠಾನದ ವತಿಯಿಂದ ತಾಲ್ಲೂಕಿನ ನಿಟ್ಟೂರು ಗ್ರಾಮದ ಮರಳು ಪಾಯಿಂಟ್ ಬಳಿ ಇಂದು ಬೆಳಿಗ್ಗೆ 10 ಗಂಟೆಗೆ ಸಂಕ್ರಾಂತಿ ಹಬ್ಬದ ಅಂಗವಾಗಿ ಮಕರ ಸಂಕ್ರಾಂತಿಯ ಔತಣಕೂಟ, ಜನಪದ ಸಂಗೀತ ಸಂಕ್ರಾಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

## ಮಹೇಶ್ ಗೌಡ ಅವರಿಗೆ 'ಕಿಶೋರ್' ಪ್ರಶಸ್ತಿ



**ಹರಿಹರ**

ಹರಿಹರ, ಜ.13- ನಗರದ ಗಾಂಧಿ ಮೈದಾನದಲ್ಲಿ ರಾಜ್ಯ ಕುಸ್ತಿ ಜೀರ್ಣೋದ್ಧಾರ ಸಮಿತಿಯಿಂದ ನಡೆಯುತ್ತಿರುವ ಹೊನಲು ಬೆಳಕಿನ ಕುಸ್ತಿ ಪಂದ್ಯದಲ್ಲಿ ಹರಿಹರ ಕಿಶೋರ್ ಪ್ರಶಸ್ತಿಯನ್ನು ಮಹೇಶ್ ಗೌಡ ಅವರಿಗೆ ಕಾಗಿನಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳು ಬಹುಮಾನ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ನಂದಿಗಾವಿ ಶ್ರೀನಿವಾಸ್, ಕೆ. ಜಡಿಯಪ್ಪ, ಉಪನ್ಯಾಸಕ ಬೀರಪ್ಪ, ಜಗದೀಶ್ ಚೂರಿ, ಸುರೇಶ್ ಚಂದಪೂರ್, ರೇವಣಪ್ಪ, ಆಸೀಫ್, ಸ್ಟಾರ್ ಈರಣ್ಣ ದಾವಣಗೆರೆ, ಗಂಗಾಧರ್ ಮಲೆಬೆನ್ನೂರು, ಸುಚೇತ್ ಪೂಜಾರ್, ನಾರಾಯಣ, ಮಾಜಿ ನಾಮನಿರ್ದೇಶನ ಸದಸ್ಯ ವಸಂತ್ ಕುಮಾರ್, ನಾಗರಾಜ್ ಕಾಳಿಂಗ್, ನಗರಸಭೆ ಸದಸ್ಯ ಪಿ.ಎನ್ ವಿರುಪಾಕ್ಷ, ಕೆ.ಜಿ. ಸಿದ್ದೇಶ್, ರಜನಿಕಾಂತ್, ಪೂಜಾರ್ ಮಾರುತಿ, ಕುಮಾರ್, ಮಲೇಬೆನ್ನೂರು ಸೈಯದ್ ರೋಷನ್ ಸಾಬ್, ಸನಾವುಲ್ಲಾ ಸಾಬ್, ತಿಪ್ಪೇಶ್, ವಿಜಯ ಮಹಾಂತೇಶ್, ವಿಜಯ, ವೈ. ಶಿವಾನಂದ, ವಿನೋದ್, ವೆಂಕಟೇಶ ಇತರರು ಹಾಜರಿದ್ದರು.

## ದುರ್ಗಾಂಬಿಕಾ ಶಾಲೆಯಲ್ಲಿ ವಿವೇಕಾನಂದರ ಜಯಂತಿ

ದಾವಣಗೆರೆ,ಜ.13- ನಗರದ ಹೊಂಡದ ರಸ್ತೆಯಲ್ಲಿರುವ ಶ್ರೀ ದುರ್ಗಾಂಬಿಕಾ ಸಂಯುಕ್ತ ಪ್ರೌಢಶಾಲೆಯಲ್ಲಿ ಕಳೆದ 12ರಂದು ಸ್ವಾಮಿ ವಿವೇಕಾನಂದರ 159ನೇ ಜಯಂತಿ ಆಚರಿಸಲಾಯಿತು.

ಶಾಲೆಯ ಮುಖ್ಯೋಪಾಧ್ಯಾಯ ಎನ್. ಎಂ. ಲಿಂಗೇಶ್ ಅಧ್ಯಕ್ಷತೆ ವಹಿಸಿ, ವಿವೇಕಾನಂದರ ಬಗ್ಗೆ ಮಕ್ಕಳಿಗೆ ಬೋಧನೆ ಮಾಡಿದರು. ಶಿಕ್ಷಕರು, ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಸಂಕ್ರಾಂತಿ

ಬಂತು ಬಂತು ಸಂಕ್ರಾಂತಿ
ತಂತು ತಂತು ಸುಖ-ಶಾಂತಿ
ತಳಿರು ತೋರಣ ಹೂವಿನ ಮಾಲೆ
ಮನೆಯ ಬಾಗಿಲಿಗೆ ಸಿಂಗಾರ
ತರ ತರಹದ ಬಣ್ಣ ಬಣ್ಣದ
ರಂಗೋಲಿ
ಮನೆಯ ಅಂಗಳದಿ ಚಿತ್ತಾರ!

ಎಳ್ಳು ಬೆಲ್ಲ; ಕೊಬ್ಬರಿ ಕಬ್ಬು;
ಸವಿಯುತ ಸಿಹಿಕಹಿ ಬಾಳಿನಲಿ
ನೋವನು ಮರೆತು ನಲಿವಲಿ ಬೆರೆತು
ಸರಿಸಮ ಸಂಗಮ ಸಂಕ್ರಾಂತಿ
ಬಾಳಲಿ ತಂತು ನವ ಕ್ರಾಂತಿ!

ನೇಸರನ ಪಥ ಬದಲು
ಮಾಗಿಯ ಚಳಿ ದೂರ
ಹೊಸ ಭರವಸೆಯೂ ಮೂಡಿಬರಲಿ
ಕನಸು ನನಸಾಗಿ ಬಾಳು ಬೆಳಗಲಿ
ಸಡಗರ-ಸಂಭ್ರಮವ ತರಲಿ
ಸಂಕ್ರಾಂತಿ!

ಬಾಳ ಪಯಣದಿ ನೋವೆಂಬ
ಎಳ್ಳು ಕಡಿಮೆಯಾಗಲಿ
ನಲಿವಿನ ಬೆಲ್ಲ ಹೆಚ್ಚಾಗಲಿ
ದುಃಖವೆಲ್ಲ ಮಾಯವಾಗಿ
ಸಂತೋಷದ ಸಮ್ಮಿಲನದ
ಸುಖ ಶಾಂತಿಯ ತರಲಿ ಸಂಕ್ರಾಂತಿ!

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

## ಧರಾಮ ವಿಜ್ಞಾನ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ

ದಾವಣಗೆರೆ, ಜ.13- ಬಾಪೂಜಿ ವಿದ್ಯಾಸಂಸ್ಥೆಯ ಧರಾಮ ವಿಜ್ಞಾನ ಪದವಿ ಕಾಲೇಜಿನಲ್ಲಿ ವಿಜ್ಞಾನ ವೇದಿಕೆ ಅಡಿಯಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದರಲ್ಲಿ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಭಾಗಗಳು ಸಂಯೋಜನೆಗೊಂಡಿದ್ದವು.



ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಹಿರಿಯ ಪಶು ವೈದ್ಯಾಧಿಕಾರಿ ಡಾ. ಕೆ.ಯು. ಅನಿಲ್ ಅವರು ಹೈನುಗಾರಿಕೆ ಮತ್ತು ಪ್ರಾಣಿ ಹಾಗೂ ಸಸ್ಯಗಳಲ್ಲಿನ ವೈರಾಣು ಮತ್ತು ಬ್ಯಾಕ್ಟೀರಿಯ ಕಾಯಿಲೆಗಳ ಬಗ್ಗೆ ಉಪನ್ಯಾಸ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಆರ್. ವನಜಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಜ್ಞಾನ ವೇದಿಕೆಯ ಸಂಚಾಲಕರಾದ ಡಾ. ಬಿ.ಸಿ. ಚೇತನಾ, ಐಕ್ಯೂಎಸಿ ಸಂಯೋಜಕರಾದ ಕಮಲ ಸೊಪ್ಪಿನ್, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಮಂಗಳಗೌರಿ, ದೈಹಿಕ ನಿರ್ದೇಶಕರಾದ ಎಸ್.ಆರ್. ಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು. ತೃತೀಯ ಬಿಎಸ್ಸಿ ವಿದ್ಯಾರ್ಥಿನಿ ದರ್ಶಿನಿ ಪ್ರಾರ್ಥಿಸಿದರು.

ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಗಿರಿಮಲ್ಲೇಶ್ವರ ಬಗರಿ ನಿರೂಪಿಸಿದರು.

ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಮಂಜುನಾಥ ಬಸಪ್ಪಚನ್ನಿ ಸ್ವಾಗತಿಸಿದರು. ಡಾ. ಹರೀಶ್ ಕುಮಾರ ಸಂಪನ್ಮೂಲ ವ್ಯಕ್ತಿ ಪರಿಚಯಿಸಿದರು. ಡಾ. ಓ. ನಾಗರಾಜ ವಂದಿಸಿದರು.

## ಮಲ್ಲಿಕಾರ್ಜುನ ಖರ್ಗೆಗೆ ಕೊರೊನಾ

ನವದೆಹಲಿ, ಜ. 13 - ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು ಅವರು ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ.

ಲಕ್ಷಣ ರಹಿತ ಸೋಂಕಿಗೆ ಗುರಿಯಾಗಿರುವ ಖರ್ಗೆ, ಮಾರ್ಗಸೂಚಿಗಳ ಪ್ರಕಾರ ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ. ಅವರು ಪೂರ್ಣ ಲಸಿಕೆ ಪಡೆದಿದ್ದಾರಾದರೂ, ಮೂರನೇ ಲಸಿಕೆಗೆ ಇನ್ನೂ ಅರ್ಹತೆ ಪಡೆದಿಲ್ಲ.

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಸೈಟ್, ಮನೆ ಮಾರಾಟಕ್ಕೆ/ಖರೀದಿಗೆ**
ಪಿ.ಜೆ. ಬಡಾವಣೆ - ಸೈಟ್, ಮನೆ, ಎಂಸಿಸಿ ಎ' & ಬಿ'- ಸೈಟ್, ಮನೆ ಸಿದ್ದವೀರಪ್ಪ, ಆಂಜನೇಯ, ವಿವೇಕಾನಂದ, ಬನಶಂಕರಿ ಬಡಾವಣೆಗಳಲ್ಲಿ ಸೈಟ್, ಮನೆ ಮಾರಾಟಕ್ಕಿವೆ.
76765 58585 (ವೀರೇಶ್)

**ಮನೆ ಮಾರಾಟಕ್ಕೆ (36 ಲಕ್ಷ)**
ಕರ್ನಾಟಕ ಗೃಹ ಮಂಡಳಿ 30×40 ಉತ್ತರ ಮನೆ ಕೇವಲ 36 ಲಕ್ಷಕ್ಕೆ
ಕಿರಣ್ ಬೂಸ್ನೂರ್ (ಏಜೆಂಟ್)
ಮೊ. 97315 63409
(20×30 ಮನೆ ಜೆ.ಹೆಚ್. ಪಟೇಲ್‌ನಲ್ಲಿ)

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಕಾರು ಚಾಲನಾ ಪರವಾನಿಗೆ ಉಳ್ಳ ನುರಿತ ಅನುಭವವಿರುವ ಕಾರು ಡ್ರೈವರ್ ಬೇಕಾಗಿದ್ದಾರೆ. ಅನುಭವದ ಮೇಲೆ ಸಂಬಳ ನಿಗದಿಪಡಿಸಲಾಗುವುದು ಮೊದಲು ಬಂದವರಿಗೆ ಆದ್ಯತೆ.
88844 40850

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ : ಎಸ್.ಟಿ. ಸೋಮಶೇಖರ್
ಫೋ. : 98803 37686

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಆಪರೇಟಿಂಗ್ ಕಲಿತಿರುವ ಹುಡುಗರು ಬೇಕಾಗಿದ್ದಾರೆ.
63646 56169

**ಬೇಕಾಗಿದ್ದಾರೆ**
ಟೆಲಿಕಾಲರ್ - (Female)
ರಿಸೆಪ್ಷನಿಸ್ಟ್ - (Female)
ಪಾರ್ಟ್ ಟೈಮ್ ಜಾಬ್
ಫೀಲ್ಡ್ ವರ್ಕ್
88614 38237

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
ಸಿಂಗಲ್ ಬೆಡ್‌ರೂಂ, ಡಬಲ್ ಬೆಡ್‌ರೂಂ, ವಿದ್ಯಾನಗರ, ಆಂಜನೇಯ ಬಡಾವಣೆ, ಸ್ವಾಮಿ ವಿವೇಕಾನಂದ ಬಡಾವಣೆ, ಜಯನಗರದಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715
ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ

**ಮನೆ ಬಾಡಿಗೆಗಿದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ 4ನೇ ಮೇನ್, 10ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ ಇರುವ ಹೊಸ ಮನೆ ಬಾಡಿಗೆಗಿದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ
98865 73205

**ಬೇಕಾಗಿದ್ದಾರೆ**
ಭರಮಸಾಗರ, ದಾವಣಗೆರೆ, ಹರಿಹರ, ರಾಣೇಬೆನ್ನೂರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ.
ಸಫಾಜ್ ಸೆಕ್ಯೂರಿಟಿ
ವಿನೋಬನಗರ, 3ನೇ ಮೇನ್, ಪಿ.ಬಿ. ರಸ್ತೆ, ದಾವಣಗೆರೆ.
91130 53483

**ನೆಲ ಮಳಿಗೆ ಬಾಡಿಗೆಗೆ ಇದೆ**
ಶ್ರೀ ಸಿದ್ದೇಶ್ವರ ಕಾಂಪ್ಲೆಕ್ಸ್ ತ್ರಿಶೂಲ್ ರಸ್ತೆ, ಕೆ.ಬಿ. ಬಡಾವಣೆ ಆದರ್ಶ ಶಾಮಿಯಾನ ಹತ್ತಿರ ಇರುವ 12x10 ಚದರ ಅಡಿ ಅಳತೆಯ ATM, ಆಫೀಸ್‌ಗೆ ಅನುಕೂಲವಿರುವ ನೆಲ ಅಂತಸ್ತಿನ ಸುಸಜ್ಜಿತ ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ
99165 25586

**ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿದೆ**
ದಾವಣಗೆರೆಯಲ್ಲಿ (ದೊಡ್ಡ ಬಾತಿ)
ಫೋ. : 88920 08800

**ಮನೆ ಮಾರಾಟಕ್ಕಿದೆ**
ಜಯನಗರ ಎ ಬ್ಲಾಕ್‌ನಲ್ಲಿರುವ ಕಾಳಿದಾಸ ಸರ್ಕಲ್ ಹಿಂಭಾಗ ಕಾರ್ನರ್ ಪಶ್ಚಿಮ ದಿಕ್ಕಿನಲ್ಲಿರುವ (30×40) ಎರಡು ಅಂತಸ್ತಿನ ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ ಮಾರುವುದಿದೆ. ಡೋರ್ ನಂ.790/6/176
94827 64316

**ದಂತ ವೈದ್ಯರು ಬೇಕಾಗಿದ್ದಾರೆ (DENTIST)**
ವಿದ್ಯಾನಗರ (ದಾವಣಗೆರೆ) ಕೊನೆಯ ಬಸ್ ನಿಲ್ದಾಣದ ಹತ್ತಿರವಿರುವ ಶ್ರೀ ಸಾಯಿ ಡೆಂಟಲ್ ಕ್ಲಿನಿಕ್‌ನಲ್ಲಿ ಕೆಲಸ ಮಾಡಲು ಅನುಭವಿ ದಂತವೈದ್ಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ: ಡಾ|| ಶಶಿಧರ್ MDS (Endodontist)
95615 89811, 94495 66566

**ಬೇಕಾಗಿದ್ದಾರೆ**
ಮೆಡ್‌ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ: ಶೋಭಾ ಟಾಕೀಸ್ ಹತ್ತಿರ, ಹರಿಹರ
ಮೊ: 78999 91860

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ವಾರ್ಡ್ ಬಾಯ್ (ಹುಡುಗ ಅಥವಾ ಹುಡುಗಿ) 10th, PUC ಪಾಸ್/ಫೇಲ್
94488 86026
98865 67791

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮನೆ ಲೀಸ್‌ಗೆ ಇದೆ**
7.50 ಲಕ್ಷಕ್ಕೆ ಹೊಸ ನಿಟುವಳ್ಳಿ ಬಡಾವಣೆಯಲ್ಲಿ ಎರಡು ಬೆಡ್ ರೂಂ ಇರುವ ಉತ್ತರ ದಿಕ್ಕಿನಲ್ಲಿರುನ 1ನೇ ಮಹಡಿಯಲ್ಲಿರುವ ಮನೆ ಇದೆ. ಬೋರ್/ಮುನ್ಸಿಪಲ್ ನೀರು, ಕಾರ್ ಪಾರ್ಕಿಂಗ್ ಇದೆ.
ಫೋ. : 97435 59986

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8500/- ಊಟ, ರೂಂ ಉಚಿತ.
97400 98047, 97400 98064

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

### ಸ್ಥಿರ ಸೊತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಈ ಕೆಳಕಂಡ ಸುಸ್ತಿದಾರರ ಮೇಲೆ ಬ್ಯಾಂಕ್ ದಾವಾ ಕ್ರಮ ಜರುಗಿಸಿ ಡಿಕ್ರಿ ಹುಕುಂ ಪಡೆದು, ಸದರಿ ಸಾಲದ ವಸೂಲಾತಿಗಾಗಿ ಸ್ಥಿರಾಸ್ತಿ ಸೊತ್ತುಗಳನ್ನು ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ವೇಳೆಯಲ್ಲಿ ಬಹಿರಂಗ ಹರಾಜು ಮಾಡಲಾಗುತ್ತೆ. ಹರಾಜಿನಲ್ಲಿ ಸ್ಥಿರ ಸೊತ್ತುಗಳನ್ನು ಕೊಳ್ಳಲು ಇಚ್ಛೆವುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸೊತ್ತುಗಳನ್ನು ಪಡೆಯಬಹುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ಇ.ಪಿ. ಸಂಖ್ಯೆ | ಬಾಕಿ ಮೊತ್ತ (ಅಸಲು+ಬಡ್ಡಿ+ ಇತರೆ ಖರ್ಚು) (03-12-2021 ರ ವರೆಗೆ) | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತಿನ ವಿವರ | ಬಹಿರಂಗ ಹರಾಜು ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಶ್ರೀಮತಿ ಸುನಂದ ಗಿರೀಶ್ ಕೋಂ ಪಿ. ಗಿರೀಶ್ ಇ.ಪಿ. ಸಂ.3/2021-22 | 9,51,24,552-00+ಇತರೆ ಖರ್ಚು | ದಾವಣಗೆರೆ ನಗರ, 30ನೇ ವಾರ್ಡ್, ಚಿಗಟೇರಿ ಲೇ ಔಟ್, ಶಾಬನೂರು ರಿ.ಸರ್ವೆ ನಂ.43 ರಲ್ಲಿರುವ ನಿವೇಶನ ಸಂಖ್ಯೆ 189 ಮತ್ತು 190, ಡೋರ್ ನಂ.2602/189 ಮತ್ತು 2762/190 ಇದರಲ್ಲಿರುವ ಬಹುಮಹಡಿ ಕಟ್ಟಡ. ನಿವೇಶನ ಸಂಖ್ಯೆ 189, 40+43/2 X 60 ಅಡಿ ನಿವೇಶನ ಸಂಖ್ಯೆ 190, 43+48/2 X 60 ಅಡಿ ಎರಡು ನಿವೇಶನಗಳ ಒಟ್ಟು ಅಳತೆ 5220 ಚ.ಅಡಿಗಳು. | ದಿನಾಂಕ 17-01-2022ನೇ ಸೋಮವಾರ ಮಧ್ಯಾಹ್ನ 12-00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | 1,00,000=00 |

**-: ಹರಾಜಿನ ಷರತ್ತುಗಳು :-**

(1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ. ಮುಖಾಂತರ ಪಾವತಿಸಬೇಕು (ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು, ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್‌ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (13) ಮೇಲ್ಕಾಣಿಸಿದ ಸ್ಥಿರಾಸ್ಥಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ದಿನಾಂಕ : 13-01-2022
ಸ್ಥಳ : ದಾವಣಗೆರೆ

ಸಹಿ/-
**ಪ್ರಧಾನ ವ್ಯವಸ್ಥಾಪಕರು**

ಸಹಿ/- **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿ,**
ದಾವಣಗೆರೆ ಇವರ ಆದೇಶದ ಮೇರೆಗೆ
ಮಾರಾಟಾಧಿಕಾರಿಗಳು (ನಿ.441) ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮಲ್ಲಿಗೆ ಹೆಲ್ತ್ ಸೆಂಟರ್ ಬಿಲ್ಡಿಂಗ್, ಆಫೀಸ್ ಅಥವಾ ಕ್ಲಿನಿಕ್‌ಗೆ ಬಾಡಿಗೆಗೆ ಇದೆ.
77955 07876

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ ಸಂಪರ್ಕಿಸಿ
70196 02944
94807 46013

**ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ**
ವಾಹನ ಇದ್ದವರಿಗೆ ಅವಕಾಶ ಸಂಪರ್ಕಿಸಿ :
ಫೋ. : 94487 53131

**ಸೈಟ್ ಮಾರಾಟಕ್ಕೆ**
ದಾವಣಗೆರೆ ಎಸ್‌ಪಿ ಕಚೇರಿ ಎದುರುಗಡೆ ಇರುವ ಸ.ನಂ. 127/2ಎ2, 30x50 (ಉತ್ತರ) ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ:
99804 38600
72596 78135

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ ಎಸ್.ಟಿ ಸೋಮಶೇಖರ್
98803 37686

**ಓಂ ಶ್ರೀ ಸಾಯಿದತ್ತ ಜ್ಯೋತಿಷ್ಯ ಕೇಂದ್ರ**
ಪಂಡಿತ್ ಶ್ರೀ ರಾಮ್ ಭಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಆರೋಗ್ಯ, ಸ್ತ್ರೀ - ಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ ಇನ್ನಿತರೆ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ಇಂದೇ ಕರೆ ಮಾಡಿ
98862 30791

**Walk In Interviews**
* Lecturers BE/M.Tech Electronics & Communication Mechanical Electrical & Electronics
* Physics Msc.,
Samruddhi Coaching Academy
6364640296

**ಎಮ್ಮೆ ಹಾಲು ದೊರೆಯುತ್ತದೆ**
ಸಂಪರ್ಕಿಸಿ :
8310538369

**ಹೆಸರು ಬದಲಾವಣೆ**
ಹೆಚ್. ಆರ್. ಲತೇಶ್ ಬಾಬು ಆದ ನಾನು ತಿಳಿಸುವುದೇನೆಂದರೆ ನನ್ನ ಆಧಾರ್ ಕಾರ್ಡ್ ಹಾಗೂ ಶಾಲಾ ದಾಖಲಾತಿಯಲ್ಲಿ ಹೆಚ್.ಆರ್. ಲತೇಶ್ ಬಾಬು ಎಂದು ನಮೂದಿಸಿರುತ್ತಾರೆ. ಆದರೆ ಡಿ.ಎಲ್.ನಲ್ಲಿ ತಪ್ಪಾಗಿ ಲತೇಶ್ ಹೆಚ್.ಆರ್. ಎಂದು ನಮೂದಿಸಿರುತ್ತಾರೆ. ಆದ್ದರಿಂದ ನೋಟರಿ ಸಮ್ಮುಖದಲ್ಲಿ ನನ್ನ ಹೆಸರು ಹೆಚ್.ಆರ್. ಲತೇಶ್ ಬಾಬು ಎಂದು ಬದಲಾಯಿಸಿದ್ದೇನೆ. ನನ್ನ ಎಲ್ಲಾ ಕಾರ್ಯ ಚಟುವಟಿಕೆಗಳು ಇನ್ನೂ ಮುಂದೆ ಹೆಚ್.ಆರ್ ಲತೇಶ್ ಬಾಬು ಎಂಬ ಹೆಸರಿನಲ್ಲಿರುತ್ತವೆ.
ಹೆಚ್.ಆರ್ ಲತೇಶ್ ಬಾಬು

**ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)**
ಹಿಂದೂ ವಧು-ವರರ ಮಾಹಿತಿ ಕೇಂದ್ರ
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**Industrial ಸೈಟ್‌ಗಳು ಮಾರಾಟಕ್ಕಿವೆ**
1) 40x68 ಅಡಿ ಅಳತೆಯ ಜೋಡಿ ಸೈಟುಗಳು ಸೋನಾಲಿಕಾ ಟ್ರಾಕ್ಟರ್ ಶೋ ರೂಮ್ ಹಿಂಭಾಗ, ಪಿ.ಬಿ.ರಸ್ತೆ ದಾವಣಗೆರೆ. 2) 25x88 ಅಥವಾ 50x88 ಅಡಿ ಅಳತೆಯ ಸೈಟ್ ಸಬ್ ರಿಜಿಸ್ಟ್ರಾರ್ ಕಛೇರಿ ಎದುರಿನ ಒಳ ರಸ್ತೆ, ದಾವಣಗೆರೆ. ಸಂಪರ್ಕಿಸಿ :
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಕೊರೊನಾ ನಡುವೆಯೂ ಕುಂದದ ವೈಕುಂಠ ಏಕಾದಶಿ ಆರಾಧನೆಯ ಕಳೆ

## ದೇವಸ್ಥಾನದಲ್ಲಿ ವೆಂಕಟೇಶ್ವರ ಸ್ವಾಮಿ ದರ್ಶನಕ್ಕಷ್ಟೇ ಅವಕಾಶ ; ಭಕ್ತರಿಂದ ದೇವರ ಪೂಜಾ ಸೇವೆ ಮೇಲೆ ಕೊರೊನಾ ಕರಿನೆರಳು

ದಾವಣಗೆರೆ, ಜ.13- ಕೊರೊನಾ ನಡುವೆಯೂ ನಗರದಲ್ಲಿ ಇಂದು ವೈಕುಂಠ ಏಕಾದಶಿ ಆರಾಧನೆಯ ಸಂಭ್ರಮ ಕಳೆ ಕುಂದಿರಲಿಲ್ಲ. ಆದರೂ ಭಕ್ತರಿಗೆ ದರ್ಶನ ಭಾಗ್ಯ ಸಿಕ್ಕಿತಾದರೂ ಪೂಜಾ ಸೇವೆ ಮೇಲೆ ಕೊರೊನಾ ಕರಿನೆರಳು ಬೀರಿತ್ತು.

ಶ್ರೀ ವೆಂಕಟೇಶ್ವರ ಸ್ವಾಮಿಯ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ದೇವರಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಭಕ್ತರು ಮುಂಜಾನೆಯಿಂದ ರಾತ್ರಿವರೆಗೂ ವೆಂಕಟೇಶ್ವರನ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾದರು. ಪ್ರತಿ ವರ್ಷಕ್ಕಿಂತ ಈ ವರ್ಷ ಕೊರೊನಾ ಹಿನ್ನೆಲೆಯಲ್ಲಿ ಭಕ್ತರ ಸಂಖ್ಯೆ ವಿರಳವಾಗಿತ್ತು.

ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನ, ಬೇತೂರು ರಸ್ತೆಯ ಶ್ರೀ ವೆಂಕಟೇಶ್ವರ ಸ್ವಾಮಿ ಸೇವಾ ಸಮಿತಿಯ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನ, ತುರ್ಚಘಟ್ಟದಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯ, ಯರವನಾಗತಿಹಳ್ಳಿ ಕ್ಯಾಂಪ್‌ನ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಭಕ್ತರ ದರ್ಶನಕ್ಕೆ ಅನುಕೂಲ ಮಾಡಿಕೊಡಲಾಗಿತ್ತು. ಕೋವಿಡ್ ನಿಯಮದ ಪ್ರಕಾರ ದೇವರ ದರ್ಶನ ಪಡೆಯಲು ಅವಕಾಶ ನೀಡಲಾಗಿದೆ. ಒಂದು ಸಲ 50 ಜನರಿಗೆ ಮಾತ್ರ ದೇವಾಲಯಕ್ಕೆ ಪ್ರವೇಶ ನೀಡಲಾಗಿತ್ತು. ಕೋವಿಡ್ ನಿಯಮಾವಳಿಗಳನ್ನು ಪಾಲಿಸುವಂತೆ ದೇವಾಲಯಗಳಲ್ಲಿ ಭಕ್ತರಿಗೆ ಮನವಿ ಮಾಡುತ್ತಿದ್ದ ದೃಶ್ಯ ಕಂಡು ಬಂದಿತು.

ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಭಕ್ತರು ದೇವರ ಪ್ರತಿಷ್ಠಾಪನಾ ಮೂರ್ತಿಯ ದರ್ಶನ ಪಡೆದರು. ಉತ್ತರ ವೈಕುಂಠ ದ್ವಾರದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವೈಕುಂಠ ಬಾಗಿಲು ನಿರ್ಮಿಸಲಾಗಿತ್ತು. ಆ ಬಾಗಿಲಿನ ಮೂಲಕ ಭಕ್ತರು ಹೊರಭಾಗಕ್ಕೆ ಆಗಮಿಸಿ ವಿಶೇಷ ಕೃಪಾಶೀರ್ವಾದಕ್ಕೆ ಸಾಕ್ಷಿಯಾದರು.

ದೇವಾಲಯದಲ್ಲಿ ಯಾವುದೇ ತೀರ್ಥ, ಪ್ರಸಾದ ವಿನಿಯೋಗ, ಅರ್ಚನೆ ಸೇರಿದಂತೆ ಭಕ್ತರಿಗೆ ಪೂಜಾ ಸೇವೆಗಳಿಗೆ ಕೊರೊನಾ ಕಾರಣದಿಂದ ಅವಕಾಶ ಇರಲಿಲ್ಲ. ದೇವರಿಗೆ ವಿಶೇಷವಾಗಿ ರವೆ ಪೊಂಗಲ್ ನೈವೇದ್ಯ ಸಮರ್ಪಿಸಲಾಯಿತು. ಬೆಳಗಿನಜಾವ 4 ಗಂಟೆಯಿಂದಲೇ ದೇವರಿಗೆ ತೋಮಾಲೆ ಸೇವೆ, ನಿತ್ಯದ ಆರಾಧನೆ, ಬಲಿಪ್ರದಾನ, ವೈಕುಂಠ ದ್ವಾರ ಪೂಜೆ ಸೇರಿದಂತೆ ಪೂಜಾ ಕೈಂಕರ್ಯಗಳು, ವಿಷ್ಣು ಸಹಸ್ರನಾಮ, ಗೋವಿಂದ ನಾಮಾವಳಿ, ತಿರುಪ್ಪಾವೈ ಪಾರಾಯಣ, ಜರುಗಿದವು. ವಿಶೇಷವಾಗಿ ಪುಷ್ಪಾಲಂಕಾರ ಮಾಡಲಾಗಿತ್ತು. ಭಕ್ತರು ತಂದ ತೆಂಗಿನಕಾಯಿ, ಬಾಳೆಹಣ್ಣು ದೇವರಿಗೆ ಸಮರ್ಪಿಸಲಾಗುತ್ತಿತ್ತು. ಈ ಪ್ರಸಾದ ಕೊಂಡ್ಯೊಯಲು ಅವಕಾಶ ಇರಲಿಲ್ಲ.

ಈ ಏಕಾದಶಿಯಂದು ಉಪವಾಸ ಮಾಡಿದರೆ ವರ್ಷದ 24 ಏಕಾದಶಿ ಮಾಡಿದ ಪುಣ್ಯ ಪ್ರಾಪ್ತಿಯಾಗಲಿದೆ. ಅಲ್ಲದೇ ವಿಷ್ಣು ಸಹಸ್ರನಾಮ, ಗೋವಿಂದ ನಾಮಾವಳಿ, ತಿರುಪ್ಪಾವೈ ಪಾರಾಯಣ ಮಾಡುವುದು ದೇವರ ಕೃಪೆಗೆ ಹೆಚ್ಚು ಪರಿಣಾಮಕಾರಿ ಎಂದು ದೇವಸ್ಥಾನದ ಪ್ರಧಾನ ಅರ್ಚಕ ಎಂ.ಎಸ್. ರವಿಭಟ್ಟರ್, ಪ್ರಧಾನ ಟ್ರಸ್ಟಿ ಎಂ.ಎನ್. ರಾಮಮೋಹನ್, ಸೇವಾಕರ್ತ ಮುರಳೀಧರ್ ಆಚಾರ್, ಗೋಪಾಲ ಗೌಡ್ರು, ಸರೋಜ ರೆಡ್ಡಿ, ಸುಧಾ ಸುರೇಶ್ ಮತ್ತಿತರರು ತಿಳಿಸಿದರು.


**ತೋಗಟವೀರದಲ್ಲಿ ನರಸಿಂಹಸ್ವಾಮಿ ದರ್ಶನ:** ತೋಗಟವೀರ ಕಲ್ಯಾಣ ಮಂಟಪದಲ್ಲಿ ವಿಕಾಸ ತರಂಗಿಣಿ ವತಿಯಿಂದ ಧನುರ್ಮಾಸ ವ್ರತ ಮಹೋತ್ಸವ 29ನೇ ದಿನವಾದ ಇಂದು ಜರುಗಿತು. ವೈಕುಂಠ ಏಕಾದಶಿ ಪ್ರಯುಕ್ತ ಲಕ್ಷ್ಮಿನರಸಿಂಹಸ್ವಾಮಿಯ ಉತ್ತರ ದ್ವಾರ ದರ್ಶನಕ್ಕೆ ಅವಕಾಶ ನೀಡಲಾಗಿತ್ತು. ಭಗವದ್ಗೀತೆ ಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ ಮಾಡಲಾಯಿತು.

ನಾಳೆ ಶುಕ್ರವಾರವೂ ದರ್ಶನಕ್ಕೆ ಅವಕಾಶವಿದೆ. ಸಂಜೆ 4 ಗಂಟೆಗೆ ತಿರುಕಲ್ಯಾಣ ಮಹೋತ್ಸವ, ಅನುಸಂಧಾನ ಜರುಗಲಿದೆ. ರಾಮಾಯಣ ಕಾಲದಲ್ಲಿ ಶ್ರೀರಂಗನಾಥ ಸ್ವಾಮಿಯ ವಿಗ್ರಹವನ್ನು ವಿಭೀಷಣನಿಗೆ ಶ್ರೀರಾಮನು ನೀಡಿದಾಗ ಅದನ್ನು ಶ್ರೀರಂಗಂ ತಿರುಚನಾಪಲ್ಲಿಯ ಕಾವೇರಿ ನದಿ ದಡದಲ್ಲಿ ಹನುಮಮಂತ ದೇವರು ಪ್ರತಿಷ್ಠಾಪಿಸಿ, ಪೂಜಿಸುವಂತೆ ವಿಭೀಷಣನಿಗೆ ತಿಳಿಸಿದನು. ವೈಕುಂಠ ದಲ್ಲಿ ರಂಗನಾಥ ಸ್ವಾಮಿಯು 365 ದಿನಗಳಲ್ಲಿ ಧನು ಮಾಸದ ಒಂದು ದಿನದಲ್ಲಿ ಉತ್ತರಾಭಿಮುಖವಾಗಿ ದರ್ಶನ ನೀಡುತ್ತಾನೆ. ಈ ದಿನದಂದು ಮುಕ್ಕೋಟಿ ದೇವತೆಗಳೇ ಈ ಸ್ವಾಮಿಯ ದರ್ಶನ ಪಡೆಯುತ್ತಾರೆ. ಅದೇ ವೈಕುಂಠ ಏಕಾದಶಿಯ ವಿಶೇಷ ಎಂದು ವಿಕಾಸ ತರಂಗಿಣಿಯ ಬಿ.ಸತ್ಯನಾರಾಯಣ ಮೂರ್ತಿ ವಿವರಿಸಿದರು.





ಎಂ.ಸಿ.ಸಿ ಬಿ ಬ್ಲಾಕ್‌ನಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಶ್ರೀ ಸ್ವಾಮಿಯ ದರ್ಶನ ಪಡೆಯುತ್ತಿರುವ ಭಕ್ತರು



ತೊಗಟವೀರ ಕಲ್ಯಾಣ ಮಂಟಪ ವೈಕುಂಠ ಏಕಾದಶಿ



ಎಂ.ಸಿ.ಸಿ. ಬಿ. ಬ್ಲಾಕ್‌ನಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಗುರುವಾರ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಶ್ರೀ ಸ್ವಾಮಿಯ ದರ್ಶನ ಪಡೆದರು.

# ಜಿಲ್ಲಾಸ್ಪತ್ರೆ ನವೀಕರಣಕ್ಕೆ ಸಚಿವ ಭೈರತಿ ಸೂಚನೆ

ದಾವಣಗೆರೆ, ಜ.13- ಕೋವಿಡ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ನಗರದ ಜಿಲ್ಲಾಸ್ಪತ್ರೆಗೆ ಇಂದು ಭೇಟಿ ನೀಡಿ, ಕೋವಿಡ್ ಮೂರನೇ ಅಲೆ ಹಿನ್ನೆಲೆ ಸಿದ್ದವಾಗಿರುವ ಬೆಡ್‌ಗಳ ವ್ಯವಸ್ಥೆಯನ್ನು ಪರಿಶೀಲಿಸಿದರು.

ಕಬ್ಬಿಣವುಳ್ಳ ಬೆಡ್‌ಗಳ ಬದಲಿಗೆ ಆಸ್ಪತ್ರೆಯಲ್ಲಿ ನವೀಕೃತ ಬೆಡ್ ಗಳ ವ್ಯವಸ್ಥೆ ಕಲ್ಪಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಸಚಿವ ಭೈರತಿ ಬಸವರಾಜ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸುತ್ತಾ, ನಮ್ಮ ಕಾಲದಲ್ಲಾದರೂ ಜಿಲ್ಲಾಸ್ಪತ್ರೆ ನವೀಕರಣವಾಗಬೇಕು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಅನುದಾನ ಮಂಜೂರಾದ ತಕ್ಷಣವೇ ಆಸ್ಪತ್ರೆಯಲ್ಲಿ ನವೀಕೃತ ಬೆಡ್ ವ್ಯವಸ್ಥೆ ಕಲ್ಪಿಸುವ ಕೆಲಸ ಮಾಡುವುದಾಗಿ ಹೇಳಿದರು.

**ಆಕ್ಸಿಜನ್ ಉತ್ಪಾದನಾ ಘಟಕ ಉದ್ಘಾಟನೆ:** 2 ಸಾವಿರ ಲೀಟರ್ ಮತ್ತು ಒಂದು ಸಾವಿರ ಲೀಟರ್ ಸಾಮರ್ಥ್ಯದ ಆಕ್ಸಿಜನ್ ಉತ್ಪಾದನಾ ಘಟಕವನ್ನು ಸಚಿವ ಭೈರತಿ ಬಸವರಾಜ್ ಉದ್ಘಾಟಿಸಿದರು. ಇವುಗಳ ಸೂಕ್ತ ನಿರ್ವಹಣೆ ಮುಖಾಂತರ ಕೋವಿಡ್ ಸೋಂಕಿತರ ಆರೋಗ್ಯ ಸುಧಾರಣೆಗೆ ಅಡಚಣೆಯಾಗದಂತೆ ಕಾರ್ಯನಿರ್ವಹಿಸಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸಲಹೆ-ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪಂಚಾಯತ್ ಸಿಇಓ ಡಾ. ವಿಜಯ ಮಹಾಂತೇಶ ದಾನಮ್ಮನವರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್ ಸೇರಿದಂತೆ, ಆರೋಗ್ಯ ಅಧಿಕಾರಿಗಳು ಇದ್ದರು.



## ಶಾಲೆ ವಿಷಯದಲ್ಲಿ ಜಿಲ್ಲಾಧಿಕಾರಿಗಳ ಕ್ರಮ ಶ್ಲ್ಯಾಘನೀಯ

ದಾವಣಗೆರೆ, ಜ. 13- ಕೊರೊನಾ ಹಿನ್ನೆಲೆಯಲ್ಲಿ ಶಾಲೆಗಳನ್ನು ಸಂಪೂರ್ಣ ಬಂದ್ ಮಾಡಬಾರದು ಎಂಬ ಜಿಲ್ಲಾಡಳಿತದ ನಿರ್ಧಾರವನ್ನು ಸ್ವಾಗತಿಸುವುದಾಗಿ ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಅಧ್ಯಕ್ಷ ತ್ಯಾವಣಗಿ ವೀರಭದ್ರಸ್ವಾಮಿ ತಿಳಿಸಿದ್ದಾರೆ.

ಸೋಂಕು ಕಂಡು ಬಂದ ಶಾಲೆಯನ್ನು ಒಂದು ವಾರ ಮಾತ್ರ ಬಂದ್ ಮಾಡಬೇಕು. ನಂತರ ಸ್ಯಾನಿಟೈಜರ್ ಮಾಡಿಸಿ ಶಾಲೆ ಪ್ರಾರಂಭಿಸಬೇಕು ಎಂಬ ಜಿಲ್ಲಾಧಿಕಾರಿಗಳು ತೀರ್ಮಾನವನ್ನು ಸಂಘವು ಸ್ವಾಗತಿಸುತ್ತದೆ ಎಂದು ಹೇಳಿದ್ದಾರೆ.

## 39ನೇ ವಾರ್ಡಿನಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ



ದಾವಣಗೆರೆ, ಜ.13- ನಗರದ ವಾರ್ಡ್ ನಂ. 39ರಲ್ಲಿ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ 1 ಕೋಟಿ 60 ಲಕ್ಷ ರೂ.ಗಳಲ್ಲಿ ಶಾಸಕ ಎಸ್.ಎ.ರವೀಂದ್ರನಾಥ್, ಸಂಸದ ಜಿ.ಎಂ.ಸಿದ್ದೇಶ್ವರ ಅವರುಗಳು ಭೂಮಿ ಪೂಜೆ ಮಾಡುವುದರ ಮೂಲಕ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಮಹಾಪೌರ ಎಸ್.ಟಿ.ವೀರೇಶ್, ಉಪ ಮಹಾಪೌರರಾದ ಶಿಲ್ಪಾ ಜಯಪ್ರಕಾಶ್, ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಾದ ಶ್ರೀಮತಿ ಗೀತಾ ದಿಳ್ಯೆಪ್ಪ, ಎಲ್. ಡಿ.ಗೋಣೆಪ್ಪ, ಉಮಾ ಪ್ರಕಾಶ್, ರೇಣುಕಾ ಶ್ರೀನಿವಾಸ್, ಪಾಲಿಕೆ ಸದಸ್ಯರಾದ ಪ್ರಸನ್ನಕುಮಾರ್, ವೀಣಾ ನಂಜಪ್ಪ, ಗೌರಮ್ಮ ಗಿರೀಶ್, ಕೆ.ಎಂ.ವೀರೇಶ್, ಎಸ್.ಮಂಜುನಾಥ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದ್ದಜ್ಜಿ, ದೂಡಾ ಆಯುಕ್ತ ಕುಮಾರಸ್ವಾಮಿ, ಸ್ಮಾರ್ಟ್ ಸಿಟಿ ಎಂ.ಡಿ ರವೀಂದ್ರ ಮಲ್ಲಾಪುರ ಮತ್ತಿತರರು ಉಪಸ್ಥಿತರಿದ್ದರು. ತರಳಬಾಳು ಬಡಾವಣೆಯ ನಾಗರಿಕರುಗಳಾದ ಕಸಾಪ ಅಧ್ಯಕ್ಷ ಹೆಚ್. ಬಿ.ವಾಮದೇವಪ್ಪ ಹಾಗೂ ಬಿಜೆಪಿ ಮುಖಂಡರಾದ ಬಿ. ದಿಳ್ಯೆಪ್ಪ, ನರೇಂದ್ರಕುಮಾರ್, ಬಾಡದ ಆನಂದರಾಜ್, ಶಿವಕುಮಾರ್ ಕಡ್ಲೇಬಾಳು, ಆರ್.ಉಜ್ಜಿನಪ್ಪ, ವಾಸಣ್ಣ, ಚೇತನ್, ನಾಗರಾಜಪ್ಪ, ಶೈಲಮ್ಮ ಷಣ್ಮುಖಪ್ಪ, ಡಾ. ತವಣಿ, ವಿನಯ್ ದಿಳ್ಯೆಪ್ಪ ಹಾಗೂ ನಾಗರಿಕರು ಉಪಸ್ಥಿತರಿದ್ದರು.

# ರೈತರ 2.68 ಕೋ.ರೂ.ವಾಪಸ್

**(1ನೇ ಪುಟದಿಂದ)** ಸನ್ಮಾನಿಸಿದ್ದಾರೆ.

ಕಳೆದ ವರ್ಷ ಮೆಕ್ಕೆಜೋಳ ಬೆಳೆದಿದ್ದ ಜಿಲ್ಲೆಯ ರೈತರಿಗೆ ವಂಚನೆಯಾದ ಬಗ್ಗೆ ದೂರು ದಾಖಲಿಸಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಬಸವರಾಜ್ ಅವರ ನೇತೃತ್ವದ ಪೊಲೀಸ್ ಅಧಿಕಾರಿಗಳ ತಂಡವು, ಕಾರ್ಯಾಚರಣೆ ನಡೆಸಿ ಆರೋಪಿಯಿಂದ 2.68 ಕೋಟಿ ರೂ. ಗಳನ್ನು ಜಪ್ತಿ ಮಾಡಿಕೊಂಡಿತ್ತು.

ಸಮಾರಂಭದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಪೊಲೀಸ್ ಅಧಿಕಾರಿಗಳ ತಂಡ ಪ್ರಶಂಸನೀಯವಾಗಿ ಕೆಲಸ ಮಾಡಿ ರೈತರ ಹಣ ರಕ್ಷಿಸಿದೆ. ಸಂಕ್ರಾಂತಿ ಹೊಸ ಬೆಳಕು ತರುವ ಹಬ್ಬ, ಈ ಹಣ ರೈತರಿಗೆ ಹಬ್ಬದ ಕೊಡುಗೆ ರೂಪದಲ್ಲಿ ದೊರೆತಿದೆ ಎಂದು ಬಣ್ಣಿಸಿದರು.

ಪ್ರಾಮಾಣಿಕ ಅಧಿಕಾರಿಗಳಿದ್ದಲ್ಲಿ ಮೋಸ, ವಂಚನೆಗೊಳಗಾದವರಿಗೆ ನ್ಯಾಯ ಕೊಡಿಸಲು ಸಾಧ್ಯವಾಗುತ್ತದೆ ಅನ್ನುವುದಕ್ಕೆ ಇದು ಉತ್ತಮ ನಿದರ್ಶನ. ರೈತರು ಬೆವರು ಸುರಿಸಿ ಬೆಳೆದ ಬೆಳೆಯ ಹಣ ವಾಪಸ್ ದೊರೆತಿದೆ ಎಂದರು. ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಈ ರೀತಿಯ ವಂಚನೆಗಳಲ್ಲಿ ರೈತರಿಗೆ ಹಣ ವಾಪಸ್ ದೊರೆಯುವುದು ಕಠಿಣ. ಅಡಿಕೆ ರೈತರು 60 ಕೋಟಿ ರೂ.ಗಳಿಗೂ ಹೆಚ್ಚಿನ ವಂಚನೆಗೆ ಒಳಗಾಗಿದ್ದನ್ನು ನೋಡಿದ್ದೇನೆ. ವಂಚನೆ ತಪ್ಪಿಸಲು ರೈತರು ಎ.ಪಿ.ಎಂ.ಸಿ.ಯಲ್ಲೇ ತಮ್ಮ ಉತ್ಪನ್ನಗಳನ್ನು ಮಾರಬೇಕೆಂದು ಕಿವಿಮಾತು ಹೇಳಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಹಳ್ಳಿಗಳಲ್ಲಿ ರೈತರು ಹತ್ತು ರೂಪಾಯಿ ಸಾಲ ಕೇಳಿದರೆ ಸುಲಭವಾಗಿ ಕೊಡುವುದಿಲ್ಲ. ಆದರೆ, ಬೆಳೆಗಳಿಗೆ 50 ರೂ. ಹೆಚ್ಚು ಬೆಲೆ ಕೊಡುವುದಾಗಿ ಯಾರಾದರೂ ಹೇಳಿದರೆ ಆತನ ಹಿನ್ನೆಲೆ ಪರಿಶೀಲಿಸದೇ ಬೆಳೆ ಕೊಡುತ್ತಾರೆ. ಈ ರೀತಿ ಮತ್ತೆ ವಂಚನೆಯಾಗದಂತೆ ರೈತರು ಜಾಗೃತವಾಗಿರಬೇಕು ಎಂದು ತಿಳಿಸಿದರು.

ರೈತರ ಪರವಾಗಿ ಮಾತನಾಡಿದ ಸಂತೋಷ್ ಮೆಳ್ಳೇಕಟ್ಟೆ ಹಾಗೂ ಗುಡದಪ್ಪ ಅವರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಿ.ಬಿ. ರಿಷ್ಯಂತ್ ಅವರ ಕಾರ್ಯ ಸ್ತುತ್ಯಾರ್ಹ. ಪೊಲೀಸ್ ಅಧಿಕಾರಿಗಳ ಶ್ರಮದಿಂದಾಗಿಯೇ ಪಣ ವಾಪಸ್ ಪಡೆಯಲು ಸಾಧ್ಯವಾಗಿದೆ. ಇದಕ್ಕಾಗಿ ಪೊಲೀಸ್ ಅಧಿಕಾರಿಗಳು, ಸಂಸದರು, ಶಾಸಕರು, ಜಿಲ್ಲಾಧಿಕಾರಿಗಳನ್ನು ಅಭಿನಂದಿಸುತ್ತೇವೆ ಎಂದರು.

ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ವಕೀಲರ ಸಂಘದ ಅಧ್ಯಕ್ಷ ಬಸವರಾಜ್, ಪ್ರದೀಪ್, ಡಿವೈಎಸ್‌ಪಿ ಬಸವರಾಜ್ ಸೇರಿದಂತೆ ಪ್ರಕರಣದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಇದೇ ಸಂದರ್ಭದಲ್ಲಿ ರೈತರು ಸನ್ಮಾನಿಸಿ ಗೌರವಿಸಿದರು.

ಸಚಿವ ಭೈರತಿ ಬಸವರಾಜ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಓ ವಿಜಯ ಮಹಾಂತೇಶ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಮುಂತಾದವರಿಗೆ ರೈತರು ಸನ್ಮಾನಿಸಿದರು.

## ಆವರಗೊಳ್ಳದಲ್ಲಿ ನಾಳೆ ಧನುರ್ಮಾಸ ಪೂಜಾನುಷ್ಠಾನ ಮಂಗಲ

ದಾವಣಗೆರೆ, ಜ.13- ಶ್ರೀ ಕ್ಷೇತ್ರ ಆವರಗೊಳ್ಳ ಪುರವರ್ಗ ಹಿರೇಮಠದಲ್ಲಿ ಲೋಕ ಕಲ್ಯಾಣಕ್ಕಾಗಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿಯವರು ಒಂದು ತಿಂಗಳ ಪರ್ಯಂತ ಹಮ್ಮಿಕೊಂಡಿದ್ದ 27 ನೇ ವರ್ಷದ ಧನುರ್ಮಾಸ ಪೂಜಾನುಷ್ಠಾನ ನಾಡಿದ್ದು ದಿನಾಂಕ 15 ರ ಶನಿವಾರ ಮಕರ ಸಂಕ್ರಾಂತಿ ದಿನದಂದು ಮಂಗಲಗೊಳ್ಳಲಿದೆ.

ಶ್ರೀಗಳು ಸದ್ಭಕ್ತರಿಗೆ ತಮ್ಮ ದರ್ಶನಾಶೀರ್ವಾದವನ್ನು ದಾವಣಗೆರೆಯ ಸಿದ್ಧವೀರಪ್ಪ ಬಡಾವಣೆಯ 3 ನೇ ಕ್ರಾಸ್‌ನಲ್ಲಿರುವ ಗುರುಕಾರುಣ್ಯ ಶಿವಯೋಗಧಾಮದ ಶಾಖೆಯಲ್ಲಿ ನೀಡುವರು.

## ದೇವಾಸ್ ಪ್ರಕರಣ : ಫ್ರಾನ್ಸ್‌ನಲ್ಲಿ ಭಾರತ ಆಸ್ತಿ ಜಪ್ತಿ

ನವದೆಹಲಿ, ಜ. 13 - ದೇವಾಸ್ ಷೇರುದಾರರ ಮನವಿಯ ಮೇರೆಗೆ ಪ್ಯಾರಿಸ್‌ನಲ್ಲಿರುವ ಭಾರತ ಸರ್ಕಾರದ ಆಸ್ತಿ ವಶಪಡಿಸಿಕೊಳ್ಳುವಂತೆ ಫ್ರಾನ್ಸ್ ನ್ಯಾಯಾಲಯ ಆದೇಶಿಸಿದೆ. ಉಪಗ್ರಹ ಒಪ್ಪಂದ ರದ್ದುಗೊಳಿಸಿದ ಕಾರಣಕ್ಕಾಗಿ 1.3 ಶತಕೋಟಿ ಡಾಲರ್ ಪರಿಹಾರ ನೀಡಬೇಕೆಂಬ ಬೇಡಿಕೆ ಜಾರಿಗೆ ತರಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಭಾರತದ ಉಚ್ಛಾಯೋಗ ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಕಟ್ಟಡವನ್ನು ಷೇರುದಾರರಿಗೆ ನೀಡಲು ನ್ಯಾಯಾಲಯ ಅನುಮತಿ ನೀಡಿದೆ. ಇದರ ಮೌಲ್ಯ 3.8 ದಶಲಕ್ಷ ಯೂರೋ ಆಗಿದೆ.

ಇಸ್ರೋ ಹಾಗೂ ದೇವಾಸ್ ಮಾಡಿಕೊಂಡ ಒಪ್ಪಂದ ಮುರಿದ ನಂತರ ಈ ಬೆಳವಣಿಗೆಯಾಗಿದೆ. ಈ ಬಗ್ಗೆ ಇಸ್ರೋ ಇಲ್ಲವೇ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## ರಾಜ್ಯ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್‌ಗೆ ರಾಘವೇಂದ್ರ ನಾಯರಿ ಜಂಟಿ ಕಾರ್ಯದರ್ಶಿ



ದಾವಣಗೆರೆ, ಜ.13- ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ ಜಂಟಿ ಕಾರ್ಯದರ್ಶಿಯಾಗಿ ನಗರದ ಕೆ.ರಾಘವೇಂದ್ರ ನಾಯರಿ ನೇಮಕಗೊಂಡಿದ್ದಾರೆ.

ಬೆಂಗಳೂರಿನಲ್ಲಿ ಈಚೆಗೆ ನಡೆದ ಒಕ್ಕೂಟದ ಕೇಂದ್ರ ಸಮಿತಿ ಸಭೆಯಲ್ಲಿ ಈ ನೇಮಕ ನಡೆಯಿತು ಎಂದು ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಬಿ.ಆನಂದಮೂರ್ತಿ ತಿಳಿಸಿದ್ದಾರೆ. ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ರಾಜ್ಯ ಸಮಿತಿಯಾದ ಕರ್ನಾ ಟಕ ಪ್ರದೇಶ ಬ್ಯಾಂಕ್ ನೌಕರರ ಒಕ್ಕೂಟವು ರಾಜ್ಯದ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಹಾಗೂ ಖಾಸಗಿ ಬ್ಯಾಂಕುಗಳಲ್ಲಿರುವ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಸಂಯೋಜಿತ ಸಂಘಗಳ ಒಕ್ಕೂಟವಾಗಿದೆ. ದಾವಣಗೆರೆ ಜಿಲ್ಲೆಗೆ ಪ್ರಪ್ರಥಮ ಬಾರಿಗೆ ಈ ಹುದ್ದೆ ದೊರೆತಿದೆ ಎಂದು ಅವರು ಹೇಳಿದ್ದಾರೆ.

## ದೇಶದಲ್ಲಿ ಅರಣ್ಯ ವ್ಯಾಪ್ತಿ 2,261 ಚ.ಕಿ.ಮೀ. ವಿಸ್ತಾರ

ನವದೆಹಲಿ, ಜ. 13 - ದೇಶದ ಅರಣ್ಯ ಹಾಗೂ ಮರಗಳಿರುವ ಪ್ರದೇಶ ಕಳೆದ ಎರಡು ವರ್ಷಗಳಲ್ಲಿ 2,261 ಚದುರ ಕಿ.ಮೀ. ವ್ಯಾಪ್ತಿಯಷ್ಟು ಹೆಚ್ಚಾಗಿದೆ ಎಂದು ಐ.ಎಸ್.ಎಫ್.ಆರ್. (ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್) 2021 ವರದಿ ತಿಳಿಸಿದೆ.

ದ್ವೈವಾರ್ಷಿಕ ವರದಿಯಲ್ಲಿ ದೇಶದ ಅರಣ್ಯ ಸಂಪನ್ಮೂಲಗಳ ಅಧ್ಯಯನದ ವಿವರ ಪ್ರಕಟಿಸಲಾಗಿದೆ. ವರದಿಯನ್ನು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಬಿಡುಗಡೆ ಮಾಡಿದ್ದಾರೆ.

2019ಕ್ಕೆ ಹೋಲಿಸಿದರೆ ಅರಣ್ಯ ಪ್ರದೇಶದ ವ್ಯಾಪ್ತಿ 1,540 ಚದುರ ಕಿ.ಮೀ. ಹಾಗೂ ಮರಗಳಿರುವ ಪ್ರದೇಶ 721 ಚದುರ ಕಿ.ಮೀ. ಹೆಚ್ಚಾಗಿದೆ ಎಂದವರು ಹೇಳಿದ್ದಾರೆ. ಆಂಧ್ರಪ್ರದೇಶದಲ್ಲಿ ಅತಿ ಹೆಚ್ಚಿನ 647 ಚದುರ ಕಿ.ಮೀ. ಅರಣ್ಯ ಪ್ರದೇಶ ಹೆಚ್ಚಾಗಿದೆ. ತೆಲಂಗಾಣದಲ್ಲಿ 632 ಚದುರ ಕಿ.ಮೀ, ಒಡಿಶಾದಲ್ಲಿ 537 ಚದುರ ಕಿ.ಮೀ., ಕರ್ನಾಟಕದಲ್ಲಿ 155 ಚದುರ ಕಿ.ಮೀ. ಹಾಗೂ ಜಾರ್ಖಂಡ್‌ನಲ್ಲಿ 110 ಚದುರ ಕಿ.ಮೀ. ಪ್ರದೇಶ ಹೆಚ್ಚಾಗಿದೆ.

# ಬರದ ನಾಡಿನ ರೈತರಲ್ಲಿ ಸಂಭ್ರಮ

**(1ನೇ ಪುಟದಿಂದ)** ಮೂಡಿದೆ ಎಂದರು.

ಕೆರೆ ತುಂಬಿಸುವ ಯೋಜನೆಗಳು ಎರಡು ಕೂಸುಗಳಿದ್ದಂತೆ. ಭರಮಸಾಗರ ಯೋಜನೆ ಮೊದಲು ಜನಿಸಿದ ಕೂಸು ಜಗಳೂರು ಕೆರೆ ತುಂಬಿಸುವ ಯೋಜನೆ ಎರಡನೇ ಕೂಸು ಜೂನ್ ವೇಳೆಗೆ ಜನಿಸಲಿದೆ ಎಂದರು.

22 ಕೆರೆ ಯೋಜನೆಯ ಲೋಪ ದೋಷಗಳು ಈ ಯೋಜನೆಗಳಲ್ಲಿ ಕಂಡುಬರುವುದಿಲ್ಲ. ಜಗಳೂರು ಕ್ಷೇತ್ರದ ಕೆರೆ ತುಂಬಿಸುವ ಯೋಜನೆ ಭರಮಸಾಗರ ಯೋಜನೆಗಿಂತ ವಿಶಿಷ್ಟವಾಗಿದೆ. ಚಟ್ನಹಳ್ಳಿ ಗುಡ್ಡದ ಮೇಲಿನಿಂದ ಗುರುತ್ವಾಕರ್ಷಣೆ ಬಲದಿಂದ ತಾಲ್ಲೂಕಿನ 53 ಕೆರೆಗಳಿಗೆ ನೀರು ಹರಿಯಲಿದೆ ಎಂದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ರೈತಪರವಾಗಿರುವ ಶ್ರೀಗಳ ಕಾಳಜಿ, ಇಚ್ಛಾಶಕ್ತಿಯಿಂದ ಭರಮಸಾಗರ ಕೆರೆಯಿಂದ ತಾಲ್ಲೂಕಿನ ಕೆರೆಗಳಿಗೆ ನೀರು ಹರಿಯುತ್ತಿವೆ. ಶ್ರೀಗಳ ಆಶಯದಂತೆ ನೀರಾವರಿ ನಾಡನ್ನಾಗಿಸುವ ಬಹುದಿನದ ಕನಸು ನನಸಾಗುವುದು ಖಚಿತ. ಜೂನ್ ತಿಂಗಳ ಒಳಗಾಗಿ ತುಪ್ಪದಹಳ್ಳಿ ಸೇರಿದಂತೆ ಒಂದೇ ತಿಂಗಳಲ್ಲಿ 18 ಕೆರೆಗಳು ಭರ್ತಿಯಾಗಲಿವೆ ಎಂದು ಭರವಸೆ ನೀಡಿದರು.

1974ರಲ್ಲಿ ನೈಸರ್ಗಿಕವಾಗಿ ಕೆರೆ ಕೋಡಿ ಬಿದ್ದು ನೀರು ಹರಿದಿತ್ತು. 2021 ರಲ್ಲಿ ತುಂಗಭದ್ರಾ ಏತ ನೀರಾವರಿ ಯೋಜನೆ ಮೂಲಕ ಕೆರೆ ಕೋಡಿ ಬಿದ್ದು ತಾಲ್ಲೂಕಿನ ತುಪ್ಪದಹಳ್ಳಿ ಕೆರೆಗೆ ನೀರು ಹರಿಯುತ್ತಿರುವುದು ಸಿರಿಗೆರೆ ಶ್ರೀಗಳ ಕೊಡುಗೆ ಎಂದು ಸಂತಸ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್, ಜಗಳೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಅಂತರ್ಜಲ ಕುಸಿತವಾಗಿದ್ದು, ಕೆರೆಗಳು ಭರ್ತಿಯಾದರೆ ಭವಿಷ್ಯದ ಪೀಳಿಗೆಗೆ ಅನುಕೂಲವಾಗಲಿದೆ. ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ದೊರೆಯಬೇಕಿದೆ. ಬೆಳೆ ವಿಮೆ ಸಮರ್ಪಕ ಜಾರಿಯಾದರೆ ರೈತರ ಆರ್ಥಿಕ ಸಂಕಷ್ಟ ದೂರಾಗಲಿವೆ ಎಂದು ಹೇಳಿದರು.

**ಕಲ್ಲು-ಮುಳ್ಳು ಲೆಕ್ಕಿಸದೆ ನಡೆದ ಶ್ರೀಗಳು:** ಬಿಳಿಚೋಡು ಗ್ರಾಮದ ಹಳ್ಳದಲ್ಲಿನ ಚೆಕ್ ಡ್ಯಾಂಗೆ ಸಂಪರ್ಕಿಸಲು ಸಮರ್ಪಕ ರಸ್ತೆಯಿಲ್ಲದೆ. ತಾತ್ಕಾಲಿಕ ಜೆಸಿಬಿ ಯಂತ್ರದಿಂದ ಮುಳ್ಳಿನ ಗಿಡ ಸ್ವಚ್ಛತೆಗೊಳಿಸಲಾಗಿತ್ತು. ಆದರೆ, ಶ್ರೀಗಳು ಕಲ್ಲು ಮುಳ್ಳು ಲೆಕ್ಕಿಸದೆ ನಡೆದು ನೀರಿನಲ್ಲಿ ತೆರಳಿ ನೀರಿನ ಹರಿವು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಶಶಿಕುಮಾರ್, ನಿವೃತ್ತ ಉಪನ್ಯಾಸಕ ಸುಭಾಷ್ಚಂದ್ರ ಬೋಸ್, ಮಹೇಶ್, ನಾಗನಗೌಡ, ಬೀರೇಶ್, ಗೌಡ್ರು ಶರಣಪ್ಪ, ಬಸವಾಪುರ ರವಿಚಂದ್ರ, ಗಿರೀಶ್ ಒಡೆಯರ್, ಚಂದ್ರನಾಯ್ಕ ಸೇರಿದಂತೆ ಇತರರು ಭಾಗವಹಿಸಿದ್ದರು.

WANTED
1) MANAGER - 2 No's
(Experienced and have worked in any manufacturing Unit)
2) SALES EXCUTIVE - 3 No's
(Experienced in any Marketing Activity)
3) FACTORY HELPER - 2 No's (ITI)
Contact : SCHAMEG MODULAR INDUSTRIES
Behind Hotel Sai International, Davanagere
Mobile : 82178 97937

ಹೆಚ್.ಎಂ. ಗುರುಸ್ವಾಮಿ ॥ ಶ್ರೀ ಕಾರಡಗಿ ವೀರಭದ್ರೇಶ್ವರ ಪ್ರಸನ್ನ ॥ ಮೊ. 9986117995
ಶ್ರೀ ವೀರಭದ್ರೇಶ್ವರ ಊಟದ ಹೋಟೆಲ್
ವಿದ್ಯಾರ್ಥಿ ಭವನ ಸರ್ಕಲ್, ದಾವಣಗೆರೆ-577002.
ನಮ್ಮೆಲ್ಲಾ ಗ್ರಾಹಕರಿಗೆ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು
ಸಂಕ್ರಾಂತಿ ಹಬ್ಬದ ಪ್ರಯುಕ್ತ 14, 15 ಜನವರಿ 2022ರಂದು
ವಿಶೇಷ ಊಟ ದೊರೆಯುತ್ತದೆ.
ವಿಶೇಷ ಸೂಚನೆ : ಊಟ ಪಾರ್ಸೆಲ್ ದೊರೆಯುತ್ತದೆ
ONLINEನಲ್ಲಿ ದೊರೆಯುತ್ತದೆ
9986117995, 7353889971

www.sparshhospital.com
SPARSH HOSPITAL
THE TOUCH OF LIFE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಕ್ಯಾನ್ಸರ್ ತಜ್ಞರು ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಕ್ಯಾನ್ಸರ್ ಚಿಕಿತ್ಸೆ
ಡಾ. ದಿನೇಶ್ ಎಂ ಜಿ
ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು
ಸ್ತನ ಕ್ಯಾನ್ಸರ್, ಗರ್ಭ ಕೋಶದ ಕ್ಯಾನ್ಸರ್, ಬಾಯಿ ಮತ್ತು ಗಂಟಲು ಕ್ಯಾನ್ಸರ್, ಹೊಟ್ಟೆ ಮತ್ತು ಕರುಳಿನ ಕ್ಯಾನ್ಸರ್, ಶ್ವಾಸ ಕೋಶದ ಕ್ಯಾನ್ಸರ್, ಕಿಡ್ನಿ ಮತ್ತು ಮೂತ್ರಕೋಶದ ಕ್ಯಾನ್ಸರ್, ದೇಹದ ಯಾವುದೇ ಭಾಗದಲ್ಲಿ ಕ್ಯಾನ್ಸರ್ ಲಕ್ಷಣಗಳು ಕಂಡುಬಂದಲ್ಲಿ ಸಂಪರ್ಕಿಸಿ
ನೋಂದಣಿಗಾಗಿ ಕರೆಮಾಡಿ: 8951991304
ದಿನಾಂಕ: 14 ಜನವರಿ 2022
ಸಮಯ: ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30ರವರೆಗೆ
ಸ್ಥಳ: ಡಾ. ಮಾಧವಮೂರ್ತಿ ಕ್ಲಿನಿಕ್
ಡಾ. ನಿರ್ಮಲ ಕೇಸರಿ ಕ್ಲಿನಿಕ್ ಎದುರು, ಪಿ ಜೆ ಎಕ್ಸಟೆನ್ಶನ್, 3ನೇ ಮೈನ್, ದಾವಣಗೆರೆ
ವೈದ್ಯರು ಪ್ರತೀ ತಿಂಗಳ ಮೊದಲನೇ ಹಾಗು ಮೂರನೇ ಶನಿವಾರದಂದು ತಪಾಸಣೆಗೆ ಲಭ್ಯರಿರುತ್ತಾರೆ

ಭಾರತದ ಅತ್ಯಂತ ವಿಶ್ವಾಸಾರ್ಹ ಸೋಲಾರ್ ಬ್ರಾಂಡ್

Sudarshan Saur®

ತಿಂಗಳ ಸುಲಭ ಕಂತುಗಳಲ್ಲಿ ಲಭ್ಯ

ಬುದ್ಧಿವಂತಿಕೆಯ ಆಲೋಚನೆ

ಸಂಕ್ರಾಂತಿ ಹಬ್ಬದ ಶುಭಾಶಯಗಳು

20% ಹೆಚ್ಚು ಬಿಸಿ ನೀರು

6 ಪಟ್ಟು ಹೆಚ್ಚು ದಪ್ಪವಾದ ಟ್ಯಾಂಕ್

ಗಡಸು ನೀರಿಗೆ ಸೂಕ್ತವಾದ ಟ್ಯಾಂಕ್

10 ವರ್ಷಗಳ ಗ್ಯಾರಂಟಿ*

*T&C apply.

ದಾವಣಗೆರೆ ತಾಲ್ಲೂಕುಗಳಿಗೆ ಡೀಲರ್ಸ್ ಬೇಕಾಗಿದ್ದಾರೆ

PEACE ENTERPRISES

SUPER STOCKIST : DAVANAGERE

Ganesh Temple Building, Opp. Bakkeshwara High School, Nijalingappa Layout, Davanagere. E-mail ID : peacedvgmarketing@gmail.com

8310042490, 9901318277, 9880156667.



ನಮ್ಮೆಲ್ಲಾ ಗ್ರಾಹಕರಿಗೆ ಸಂಕ್ರಾಂತಿ ಹಬ್ಬದ ಶುಭಾಶಯಗಳು

Uttam Organic Oil

100% Natural Wood & Cold Pressed Oil

Taralabalu Badavane, Woodspace Interiors Shop, Davangere.

Groundnut Oil ಶೇಂಗಾ ಎಣ್ಣೆ

Coconut Oil ಕೊಬ್ಬರಿ ಎಣ್ಣೆ

Buy Any 2 ltr Oil Get 1 KG Free

Buy Any 5 ltr Oil Get 1 KG Free

ಸಂಕ್ರಾಂತಿ ಕೊಡುಗೆ...

7406662229, 7019877485





## ನಾಯಿ ಕಳೆದಿದೆ

ಬ್ರೀಡ್ ಜರ್ಮನ್ ಶಫರ್ಡ್ ತಳಿಯ "ಬಂಟಿ" ಎಂಬ ಹೆಸರಿನ, 4 ತಿಂಗಳಿನ ನಾಯಿ ದಾವಣಗೆರೆ ಎಂಸಿಸಿ 'ಎ' ಬ್ಲಾಕ್, ಸಾಯಿ ಬಾಬಾ ಮಂದಿರ ರೋಡ್‌ನಲ್ಲಿ ಕಳೆದಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು.

ಸಂಪರ್ಕಿಸಿ: 99866 60861


## ಚಿರಸ್ಮರಣೆ



ಜನನ: 12.03.1962

ಮರಣ : 14.01.2016

### ಶ್ರೀಮತಿ ಆರ್.ಎಲ್. ವಿಶಾಲಾಕ್ಷಿ

ನಿಮ್ಮ ದೈವ ಭಕ್ತಿಯಿಂದಾಗಿ ನಿಮ್ಮನ್ನು ಬೇಗನೇ
ಆ ಭಗವಂತನು ತನ್ನ ಸನ್ನಿಧಿಗೆ ಕರೆದುಕೊಂಡ.
ಈಗಲೂ ನಮ್ಮೊಂದಿಗೆ ಇದ್ದೀರೆಂದು ನಮ್ಮ ಭಾವನೆ.

ಸದಾ ನಿಮ್ಮ ಪುಣ್ಯ ಸ್ಮರಣೆಯಲ್ಲಿ :

ಪತಿ: ಕೆ.ಬಿ.ನಂಜುಂಡಪ್ಪ, ಮಕ್ಕಳು: ಕೆ.ಎನ್.ಶ್ರೀ ಹರ್ಷ
ಕೆ.ಎನ್. ನಿತಿನ್, ಸೊಸೆಯಂದಿರು :ಪಿ.ಜಿ. ಸ್ವಾತಿ, ಎಸ್. ಸ್ಫೂರ್ತಿ
ಮೊಮ್ಮಗ: ಧನ್ವಿಕ್, ಮೊಮ್ಮಗಳು : ಅದ್ರಿತಿ ದಾವಣಗೆರೆ.
ದ್ಯಾಮಜ್ಜನ ವಂಶಸ್ಥರು, ಕ್ಯಾತನಹಳ್ಳಿ. ಅರಸೀಕೆರೆ ತಾಲ್ಲೂಕು.
ಲಿಂಗೈಕ್ಯರ ಸಹೋದರ-ಸಹೋದರಿಯರು ಹಾಗೂ ಬಂಧು-ಮಿತ್ರರು.


ನಾಡಿನ ಸಮಸ್ತ ಜನತೆಗೆ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು

ಈ ಮಕರ ಸಂಕ್ರಾಂತಿಯ ಶುಭ ಸಂದರ್ಭವನ್ನು ಹೊಸ ಹುಂಡೈ ಕಾರಿನೊಂದಿಗೆ ಸಂಭ್ರಮಿಸಿ



Best Exchange Value for your existing car.

HYUNDAI

| VENUE | SANTRO | ELANTRA | CRETA | The all new i20 | ALCAZAR | VERNA | TUCSON | AURA | GRAND i10 NIOS |
|---|---|---|---|---|---|---|---|---|---|
| Price Starts @ 6.99 Lakh* | Benefits upto 28,000* | Price Starts @ 17.86 Lakh* | Price Starts @ 10.23 Lakh* | Benefits upto 13.000* | Price Starts @ 16.34 Lakh* | Price Starts @ 9.32 Lakh* | Price Starts @ 22.69 Lakh* | Benefits upto 48.000* | Benefits upto 48.000* |

K J HYUNDAI

Head Office: # 371/271, P.B.Road, Avaragere, Davanagere-577 003 Ph: 70220 42241, 74065 55077, 70220 01205.
Branch: Opp to S.J.M.I.T. College, NH-4, P.B.Road, Chitradurga-577 501. Ph: 70220 01207.
Branch: NH-13, Holalkere Road, Channagiri-577 213 Ph: 08189-298009, 70224 25985, 74065 55868.





ಶ್ರೀ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ

SHREE BHAGWAN MAHAVEER JAIN HOSPITAL

CURE, CARE & CAMPASSION

ಇಂದಿನಿಂದ ಶುಭಾರಂಭ

Advanced Facilities

- Modular Operation Theaters
  24 X 7 Trauma Care Centre & Emergency Care
- Intensive Care Unit (ICU)
  Air Condioned Labour Rooms, OPDs & Wards
- Dialysis Centre
  24 X 7 STAN FORD HI-Tech Laboratory
- 24 X 7 Pharmacy + Home delivery of Medicines
  Master Health Check up
- 24 X 7 Ambulance With Ventilator Facility
  Health Insurance Scheme

Departments

- Anesthesia
  Cardiology
- Ear, nose and throat (ENT)
  Gastroenterology
- General Surgery
  Neurology
- Obstetrics and gynecology units
  Oncology




BEST WISHES FROM

Shree Bhagwan Mahaveer Jain Hospital, Bangalore

Dr. A M Shivakumar : M.B.B.S, MS(ENT)
Dr.D T Naik : M.B.B.S, ENT, DLO, ADIA
Dr. Prakash S S : M.B.B.S, MD(Cardiologist)
Dr. Channamma : DGO, OBG
Dr. Manoj Kumar S Pujar : MBBS,MD(Gen-Med)
Dr. Amaresh D G : M.B.B.S,M.S,D.N.B
Dr. Netra S S : M.B.B.S, Anesthesia
Dr.Jayesh Kumar Jain BDS,MDS FICOI (USA)
Dr.G.S Renukananda : M.B.B.S, MS (ENT)
Dr. Shekar Doddagowdar : M.B.B.S, Sonaligist

Dr. Ritashna Dhelaria : BDS, MD (Perio)
Dr.Gururaj S : M.B.B.S,M.D(Pediatrics)
Dr. Praveen S S : M.B.B.S, M S
Dr. Ravi G O : M S (Ortho)
Dr. B G Shivakumar : M.B.B.S,M.D
Dr. Chaya Jain: Dental Surgen
Dr.Ramesh Pujar :MBBS, MD(Ortho)
Dr. Nitin A B : MS, M.Ch, FCSI
Prashanth S S

- Anup S jain – Anup Tilez n tapz
- Ajith Oswal – Optical paradise
- Ajith Shah – Shah distributors
- Arun Popatlal Jain – Samyak ply
- Balavanth Kumar – Shree Rahod Fertilisers
- Jayachand P Jain – Navkar Jewellers
- P Manoj – Vardhaman Jewellery Works
- A Prakash – Infrastructure Developer for Wind Power Projects
- Sandeep Dhelaria – Shantala Wedding Mall
- Sanghvee Mahaveer Jain – Ambika furniture : Law solutions
- Sunil kumar – Blossom Home Appliances

# 47/1 (Old Ashvini Hospital ) ,A.V.K Collage Road P.J Extention, Davanagere-577002. :08192-258727 / 258677. sbmjhospital@gmail.com


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte